₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole    Vol XXXIV - 5    May 2016

GES 16




**ಕನ್ನಡದ ಖ್ಯಾತ ಕವಿ ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರಿಂದ**

**ನೇಸರು ವಿಶೇಷ ಸಂಚಿಕೆ ಬಿಡುಗಡೆ**

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# ಕವಿಯಾಗಬೇಕಾದರೆ ಮೊದಲು ಆಮಿಷಗಳನ್ನು ಗೆಲ್ಲಬೇಕು – ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿ




ಮೈಸೂರು ಅಸೋಸಿಯೇಷನ್‌ಗೆ 90ವರ್ಷ ತುಂಬಿದ ಸವಿನೆನಪಿಗಾಗಿ ಜಾಗತಿಕ ಮಟ್ಟದಲ್ಲಿ ಕವನ ಸ್ಪರ್ಧೆಯನ್ನು ಹಮ್ಮಿಕೊಂಡಿತ್ತು. 'ನೇಸರು' ಜಾಗತಿಕ ಕನ್ನಡ ಕವನ ಸ್ಪರ್ಧೆ – 2016ರ ಫಲಿತಾಂಶ ಘೋಷಣೆ, ವಿಜೇತರಿಗೆ ಸನ್ಮಾನ, ಬಹುಮಾನ ವಿತರಣೆ ಹಾಗೂ ಮೈಸೂರು ಅಸೋಸಿಯೇಷನ್‌ನ ಮುಖವಾಣಿ ನೇಸರು ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮವು ದಿನಾಂಕ ಏಪ್ರಿಲ್ 9, 2016ರಂದು ಮೈಸೂರು ಅಸೋಸಿಯೇಷನ್‌ನ ಸಭಾಗೃಹದಲ್ಲಿ ನಡೆಯಿತು.




ಮುಖ್ಯ ಅತಿಥಿಯಾಗಿ ನಾಡಿನ ಖ್ಯಾತ ಕವಿ ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರು ಉಪಸ್ಥಿತರಿದ್ದರು. ಪದ್ಮನಾಭ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರು ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಡಾ. ಎಚ್. ಎಸ್. ವೆಂಕಟೇಶ ಮೂರ್ತಿಯವರು ಮೈಸೂರು ಅಸೋಸಿಯೇಷನ್‌ನ ಮುಖವಾಣಿ ನೇಸರು ವಿಶೇಷ ಸಂಚಿಕೆ ಬಿಡುಗಡೆ ಮಾಡಿದರು.

ಮಂಜುನಾಥಯ್ಯನವರು ಪ್ರಾಸ್ತಾವಿಕವಾಗಿ ಮಾತನಾಡುತ್ತ, ಮೈಸೂರು ಅಸೋಸಿಯೇಷನ್ ಈ ಮಟ್ಟಕ್ಕೆ ಬೆಳೆದು ಬರಲು ಹಲವಾರು ಮಹನೀಯರ ನಿರಂತರ ಪರಿಶ್ರಮವೇ ಕಾರಣ ಎಂದು ಹೇಳಿದರು. ನಾರಾಯಣ ನವಿಲೇಕರ್ ಅವರು ಕವನ ಸ್ಪರ್ಧೆಯಲ್ಲಿ ವಿಜೇತರಾದವರ ಹೆಸರು ಘೋಷಣೆ ಮಾಡಿದರು. ಡಾ. ಎಚ್. ಎಸ್.





ವೆಂಕಟೇಶ್ ಮೂರ್ತಿಯವರು ವಿಜೇತರಿಗೆ ಶಾಲು ಹೊದಿಸಿ, ಪುಷ್ಪ, ಧನ ಗೌರವ ನೀಡಿ ಸನ್ಮಾನಿಸಿದರು.

ವಿಜೇತರನ್ನು ಸನ್ಮಾನಿಸಿದ ನಾಡಿನ ಖ್ಯಾತ ಕವಿ, ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರು ಮಾತನಾಡುತ್ತಾ, ವಿಜೇತರನ್ನು ಮನಸಾರೆ ಅಭಿನಂದಿಸಿದರು. ಮೈಸೂರು ಅಸೋಸಿಯೇಷನ್ ತನ್ನ ನಿಡಿದಾದ 90 ವರ್ಷಗಳ ಸಾಮಾಜಿಕ, ಸಾಂಸ್ಕೃತಿಕ ಕೈಂಕರ್ಯದ ಈ ಸುವರ್ಣ ಅಧ್ಯಾಯ ಇವತ್ತು ಜಾಗತಿಕ ಮಟ್ಟದ ಕವಿತಾ ಸ್ಪರ್ಧೆಯನ್ನು ಏರ್ಪಡಿಸಿ, ಅದರಲ್ಲಿ



ವಿಜೇತರಾದವರನ್ನು ಕರೆಸಿ, ಸನ್ಮಾನಿಸಿದ್ದು ಬಹಳ ಒಳ್ಳೆಯ ಕೆಲಸ. ಹೊಸ ಪೀಳಿಗೆಯ ಲೇಖಕರನ್ನು ನೋಡಿದಾಗ, ವಯಸ್ಸಾದ ನನ್ನಂಥವರಿಗೆ ತುಂಬ ಸಂತೋಷವಾಗುತ್ತದೆ. ಯಾಕೆಂದರೆ ನಮ್ಮ ಹಿರಿಯರು ಯಾವ ಒಂದು ಕಾವ್ಯ ಪರಂಪರೆಯನ್ನು ಪ್ರಾರಂಭ ಮಾಡಿದರೋ ಅದನ್ನು ಮುಂದುವರಿಸುವಂತಹ ವಾರಿಸುದಾರರು ಇದ್ದಾರೆ ಅನ್ನೋದೇ ಬಹಳ ಸಂತೋಷದ ಮತ್ತು ಅಭಿಮಾನದ ಸಂಗತಿ. ಇವತ್ತು ವಿಜೇತರಾದ ಐದು ಕವಿಗಳಲ್ಲಿ ಮೂರು ಜನ ಮಹಿಳೆಯರೇ. ಇದನ್ನು ಏನನ್ನು ಸೂಚಿಸುತ್ತಿದೆ ಅಂದರೆ ನಿಧಾನವಾಗಿ ಕನ್ನಡ ಕಾವ್ಯ ಸಂದರ್ಭದಲ್ಲಿ ಗಟ್ಟಿಯಾದ ಒಂದು ಮಹಿಳಾ ಧ್ವನಿ ರೂಪಿತವಾಗುತ್ತಿದೆ ಎನ್ನೋದನ್ನು ಈ ಅಂಶ ಸೂಚಿಸುತ್ತದೆ. ದೊಡ್ಡ ಸಂಖ್ಯೆಯ ಕನ್ನಡ ಸಾಹಿತ್ಯದಲ್ಲಿ ನಾವು ಯಾವಾಗಲೂ ಗಮನಿಸುತ್ತಾ ಇದ್ದುದ್ದುದೆಂದರೆ ಎಂಥೆಂಥ ಮಹಾನ್ ಪ್ರತಿಭಾಶಾಲಿ ಪುರುಷ ಕವಿಗಳು ಕಾಣಿಸಿದರು. ಅವರಿಗೆ ಹೆಗಲೆಣೆಯಾಗಿ ನಿಲ್ಲಬಲ್ಲಂತಹ ಮಹಿಳಾ ಕವಿಗಳು ಕನ್ನಡದಲ್ಲಿ ಅಷ್ಟಾಗಿ ಬರಲಿಲ್ಲ. ಎಲ್ಲೊ ಒಬ್ಬಳು ಅಕ್ಕಮಹಾದೇವಿ, ಎಲ್ಲೋ ಒಬ್ಬಳು ಸಂಚಿ ಹೊನ್ನಮ್ಮ, ಎರಡು ಮೂರು ಹೆಸರನ್ನು ನೀವು ಸಾವಿರ ವರ್ಷಗಳ ಇತಿಹಾಸ ತನ್ನನ್ನು ಗುರುತಿಸಿ ಕೊಂಡಿದೆ. ಯಾಕೆ ಸಮರ್ಥರಾದಂತಹ ಮಹಿಳಾ ಕವಿಗಳು ಕಾಣಿಸಲಿಲ್ಲ ಕನ್ನಡ ದಲ್ಲಿ? ಇಪ್ಪತ್ತನೇ ಶತಮಾನ ದಲ್ಲಿಯೇ ನಾವು ಘನವಾದ ಲೇಖಕಿಯರನ್ನು ನೋಡುತ್ತೇವೆ. ಅಕ್ಕಮಹಾದೇವಿಯ ನಂತರ ಕಾಣುತ್ತೇವೆ. ಒಬ್ಬ ಮಹಿಳಾ ಲೇಖಕಿ ಅಥವಾ ಒಬ್ಬ ಪುರುಷ



(ಪುಟ 15ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 34** **ಮೇ 2016** **ಸಂಚಿಕೆ 5**

ಮುಂಬಯಿ ಒಂದು ಮಾಯಾನಗರಿ. ಇಲ್ಲಿನ ಬದುಕು ಕೂಡ ಜಂಜಾಟದ ಬದುಕು. ಒಂದು ರೀತಿಯಲ್ಲಿ ಯಾಂತ್ರಿಕತೆಯಿಂದ ಕೂಡಿದ ಬದುಕು. ನಾವು ಇಂದು ಎಲ್ಲವನ್ನು ಯಂತ್ರದ ಮೇಲೆ ಅವಲಂಬಿತವಾಗಿದ್ದೇವೆ ಎಂದರೆ ಒಂದು ದಿನ ಲೈಟ್ಇಲ್ಲ ಅಂದರೆ ನಮ್ಮ ಕೈ ಕಾಲೇ ಆಡುವುದಿಲ್ಲ. ಅಂದರೆ ಅಷ್ಟರ ಮಟ್ಟಿಗೆ ನಾವು ವಿಚಲಿತರಾಗಿ ಬಿಡುತ್ತೇವೆ. ಮೊದಲು ಕೆಲಸ ನಮ್ಮ ಕೈಯಿಂದ ಮಾಡಲಿಕ್ಕೆ ಗಂಟೆ ಗಟ್ಟಲೆ ತಾಗುತ್ತಿತ್ತು. ಆದರೆ ಇಂದು ಹಾಗಿಲ್ಲ. ನಿಮಿಷ ಮಾತ್ರದಲ್ಲಿ ಕೆಲಸವನ್ನು ಮಾಡಿ ಮುಗಿಸಬಹುದು. ಇಷ್ಟಾದರೂಯಾರ ಹತ್ತಿರವೂ ಸಮಯವಿಲ್ಲ. ಸಮಯದ ಕೊರತೆಯೇ ಎಲ್ಲೆಡೆ ಎದ್ದು ಕಾಣುತ್ತದೆ. ಮನೆಯ ಹಿರಿಯವರೊಂದಿಗೆ ಕುಳಿತು ಹರಟೆ ಹೊಡೆಯಲಿಕ್ಕೂ ಯಾರಲ್ಲೂ ಸಮಯವಿಲ್ಲ. ಇದು ನಮ್ಮ ಯಾಂತ್ರಿಕತೆಯ ಬದುಕಿನ ಪರಿಣಾಮ. ನಾವು ದೈನಂದಿನ ಬದುಕಿನಲ್ಲಿ ಎಷ್ಟೊಂದು ಮಗ್ನರಾಗಿದ್ದೇವೆ ಎಂದರೆ ನಮಗಾಗಿ ನಮ್ಮಲ್ಲೇ ಸಮಯವಿಲ್ಲದಂತಾಗಿದೆ. ಇಲ್ಲಿ ಸಮಯದ ಮಹತ್ವ ಮೇಲ್ನೋಟಕ್ಕೆ ಎದ್ದು ಕಂಡರೂ, ನಿಜವಾಗಿ ಅಲ್ಲಿರೋದು ಅಸ್ತಿತ್ವದ ಹೋರಾಟ. ಜಾಗತೀಕರಣದ ಭರಾಟೆಯಲ್ಲಿ ತನ್ನತನವನ್ನು ಕಾಪಾಡಿಕೊಂಡು, ತನ್ನನ್ನು ಸಂಪೂರ್ಣವಾಗಿ ಅದಕ್ಕೆ ಒಡ್ಡಿಕೊಳ್ಳುವ ನಿರಂತರ ಪ್ರಯತ್ನವನ್ನು ಕಾಣುತ್ತೇವೆ. ಜಾಗತೀಕರಣ ತಂದೊಡ್ಡುವ ಬಾಹ್ಯ ಒತ್ತಡಗಳಿಂದ ನಲುಗಿ ಹೋಗದೆ, ಮೇಲೆದ್ದು, ಅದಕ್ಕೆ ಪ್ರತಿರೋದವನ್ನುಂಟು ಮಾಡಬೇಕೆಂಬ ಮನೋಬಲ ಬೆಳೆದಿದೆ.

ನಾವು ನಮ್ಮನ್ನು ಎಷ್ಟೊಂದು ವ್ಯಸ್ತರಾಗಿ ಇಟ್ಟುಕೊಂಡಿದ್ದೇವೆ ಅಂದರೆ, ಯಾರಿಗಾದರೂ ಸಹಾಯದ ಅಗತ್ಯವಿದೆ ಎಂದರೆ ಅವರಿಗೆ ಸಹಾಯ ಮಾಡುವ ಮನಸ್ಸಿದ್ದರೂ, ಈಗ ಸಮಯವಿಲ್ಲ ಎಂದು ಮುಂದೆ ನಡೆಯುತ್ತಾರೆ. ಮೊನ್ನೆ ಮೊನ್ನೆಯಷ್ಟೇ ನನ್ನ ಕಣ್ಣೆದುರೇ ನಡೆದ ಘಟನೆ. ಪನ್ವೇಲ್ನಿಂದ ಬಂದ ಟ್ರೈನ್ ಕುರ್ಲಾ ಸ್ಟೇಷನ್ನಲ್ಲಿ ಬಂದು ನಿಂತಾಗ, ಅದರಲ್ಲಿ ಮೊದಲು ಇಳಿದ ಹುಡುಗಿಯೊಬ್ಬಳು ಆಯತಪ್ಪಿ ಪ್ಲಾಟ್ಪಾರಂನ ಮೇಲೆ ಬಿದ್ದಳು, ಅವಳನ್ನು ಎತ್ತುವ ಬದಲು, ಹಿಂದೆ ಇಳಿಯುವವರು ಎಲ್ಲರೂ ಅವಳ ಮೇಲೆ ಹತ್ತಿ ಇಳಿದರೇ ಹೊರತು, ಯಾರೂ ಅವಳನ್ನು ಎತ್ತುವ ಪ್ರಯತ್ನ ಮಾಡಲಿಲ್ಲ. ಆ ಬೋಗಿಯಎದುರುಗಡೆ ಬರೋದು ಒಂದು ಚಿಕ್ಕ ಬ್ರಿಡ್ಜ್.ಯಾವಾಗಲೂ ಆ ಬ್ರಿಜ್ನಲ್ಲಿ ರಶ್ನಿಂದಾಗಿ ಗಂಡಸರು ಮತ್ತು ಹೆಂಗಸರ ನಡುವೆ ಮಾರಾಮಾರಿ. ಆ ಬ್ರಿಜ್ಕ್ರಾಸ್ ಮಾಡಬೇಕಾದರೆ ಕಡಿಮೆ ಅಂದರೆ ಹತ್ತು ನಿಮಿಷಬೇಕಾಗುತ್ತದೆ. ಅದಕ್ಕೆ ಜನರು ಇಳಿದ ಕೂಡಲೆ ಆ ಕಡೆ ಓಡುತ್ತಾರೆ. ಲೇಟ್ ಆದರೆ ರಶ್ ಆಗುತ್ತದೆ ಅಲ್ವಾ ಅದಕ್ಕೆ. ಬ್ರಿಡ್ಜ್ ಕಡೆ ಓಡುವ ಅವಸರದಲ್ಲಿ ಬಿದ್ದ ಹುಡುಗಿಯನ್ನು ಎತ್ತುವ ವ್ಯವದಾನ`ಯಾರಲ್ಲೂ ಇಲ್ಲ. ಆ ರಶ್ನಲ್ಲಿ ನಾವು ನುಗ್ಗಿ ಆ ಹುಡುಗಿಗೆ ಸಹಾಯ ಮಾಡುವ ಹಾಗೂ ಇಲ್ಲ. ಅಣೆಕಟ್ಟಿಗೆ ಕಟ್ಟಿದ ತಡೆಯನ್ನು ಸರಿಸಿದಾಗ, ಒಂದೇ ಸಲ ರಭಸದಿಂದ ನೀರು ನುಗ್ಗಿ ಹರಿಯುವಂತೆ, ಜನ ಬೋಗಿಯಿಂದ ಇಳಿಯುತ್ತಿದ್ದರು. ಆ ಹುಡುಗಿಯ ಕೂಗು ಕೇಳಿಬರುತ್ತಿದೆ. ಆ ರಶ್ ನಲ್ಲಿ ಎಲ್ಲಿಂದ ಕೂಗು ಕೇಳಿ ಬರುತ್ತಿದೆ ಎಂದು ಅರ್ಥಮಾಡಿಕೊಳ್ಳಲು ಕೆಲವು ಸಮಯತಾಗಿತು ನಮಗೆ. ರಶ್ ಕಡಿಮೆ ಆದ ಮೇಲೆ ನಾವು ಒಂದು ಒಂದೆರಡು ಹೆಂಗಸರು ಸೇರಿ ಆ ಹುಡುಗಿಯನ್ನು ಎತ್ತಿ ಕೂರಿಸಿದೆವು.

ಸಮಯದ ಭರಾಟೆಯಲ್ಲಿ ನಾವು ನಮ್ಮ ಸಂಸ್ಕೃತಿ, ಮಾನವೀಯತೆಯನ್ನು ಮರೆತು ಬಿಟ್ಟಿದ್ದೇವೆ ಅನಿಸುತ್ತದೆ. ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಲ್ಲಿ ಎಲ್ಲಿ ನಮ್ಮತನವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಅನ್ನುವ ಆತಂಕ ಸೃಷ್ಟಿಯಾಗಿದೆ. ಹಿಂದೆ ಒಂದು ಕಾಲವಿತ್ತು, ಬೇರೆಯಾವ ಮನೋರಂಜನಾ ಮಾಧ್ಯಮದ ವ್ಯವಸ್ಥೆ ಇಲ್ಲದಿದ್ದರಿಂದ, ಅಜ್ಜಿ ಅಜ್ಜ ಹೇಳುವ ಕಥೆಗಳನ್ನು, ಒಗಟುಗಳನ್ನು, ಮಾತುಗಳನ್ನು ಆನಂದದಿಂದ ಆಲಿಸುತ್ತಿದ್ದೆವು. ಆದರೆ ಈಗ ಹಾಗಿಲ್ಲ, ಒಂದಕ್ಕಿಂತ ಹೆಚ್ಚು ಮನೋರಂಜನಾ ಮಾಧ್ಯಮಗಳು ಬಂದಿರೋದರಿಂದ ಅಜ್ಜಿಯ ಕಥೆಯನ್ನು ಕೇಳುವವರಿಲ್ಲವಾಗಿದೆ. ಅವರ ಅನುಭವದ ಮಾತುಗಳು ನಮ್ಮ ಪೀಳಿಗೆಗೆ 'ಎಂಥ ಪಕಾವ್', 'ಎಂಥದು ನಿಮ್ಮದೊಂದು ಚೊರೆ ಮರಾಯ್ರೆ' ಅನಿಸಬಹುದು. ಅವರ ಅನುಭವದ ಮಾತುಗಳು ನಮ್ಮ ಬಾಳಿನ ದೀವಿಗೆ ಅನ್ನೋದು ಮರೆತು ಬಿಟ್ಟಿದ್ದೇವೆ ನಾವಿಂದು. ತಮ್ಮ ಮಾತನ್ನು ಯಾರೂ ಕೇಳುವವರಿಲ್ಲ ಎಂಬ ದುಃಖದಲ್ಲಿರುವ ಅಜ್ಜಿಯಂದಿರು ಇಂದು ಮೂಲೆ ಗುಂಪಾಗುತ್ತಿದ್ದಾರೆ. ತಾಳ್ಮೆಯಿಂದ ಒಮ್ಮೆ ಅವರ ಮಾತುಗಳನ್ನು ಆಲಿಸಿ, ಅದರಲ್ಲಿ ಎಷ್ಟೊಂದು ಗಾಢವಾದ ಚಿಂತನೆ ಅಡಗಿದೆ ಎನ್ನೋದು ನಿಮಗೇ ತಿಳಿಯುತ್ತದೆ. ನೀವು ಅವರ ಮಾತುಗಳನ್ನು ಆಸಕ್ತಿಯಿಂದ ಕೇಳಿದ್ದೇ ಆದರೆ ಅವರು ಮತ್ತಷ್ಟು ಹುಮ್ಮಸಿನಿಂದ ಮನಬಿಚ್ಚಿ ಮಾತನಾಡುತ್ತಾರೆ. ಆಗ ಅವರ ಮುಖದಲ್ಲಿ ಉಂಟಾಗುವ ಖುಷಿಯನ್ನು ನೋಡಿ. ಆ ಖುಷಿ ಯಾವ ಕೋಟಿಗೆ ಕಡಿಮೆ? ನೀವೇ ಹೇಳಿ.

***– ಡಾ. ಜ್ಯೋತಿ ಸತೀಶ್***

# ಹೆಣ್ಣು.....

'ಕುಟುಂಬದ ಕಣ್ಣು..!' ಆಹಾ ಕೇಳೋಕೆ ಬಹಳ ಚೆನ್ನಾಗಿದೆ. ಪ್ರಾಸಬದ್ಧ ಕವಿತೆ ರೀತಿ! ನಮ್ಮ ಅಮೂಲ್ಯ 'ನೇತ್ರ'ಗಳನ್ನು ಕಾಪಿಟ್ಟುಕೊಳ್ಳುವಂತೆ ನಮ್ಮ ಕುಟುಂಬದ 'ಹೆಣ್ಣ'ನ್ನು ಅಮೂಲ್ಯವೆಂದು ನಿಜವಾಗಿ ಭಾವಿಸಿದ್ದೇವೆಯೇ? ಅವಳ ಸಂತೋಷ, ಹಿತ-ಅಹಿತಗಳಿಗೆ, ದುಃಖ-ದುಮ್ಮಾನಗಳಿಗೆ ಗಮನಹರಿಸಿ ಬೆಲೆ ಕೊಟ್ಟು ಸ್ಪಂದಿಸುತ್ತಿದ್ದೇವೆಯೇ? ಲಕ್ಷ್ಮೀ, ಸರಸ್ವತಿ, ಪಾರ್ವತಿ, ದುರ್ಗೆ ಎಂದು ಪೀಠದ ಮೇಲೆ ಕುಳ್ಳಿರಿಸಿ, 'ದೈವ'ವೆಂದೂ 'ಪೂಜನೀಯ'ವೆಂದೂ ಭಾವಿಸಿ ಅರ್ಚನೆ ಮಾಡುವುದು. ಅಷ್ಟೇ ಏನು? ಜೀವಜಲ 'ಗಂಗೆ', 'ಯಮುನೆ', 'ಕಾವೇರಿ', 'ತುಂಗೆ', 'ಭದ್ರೆ' ಎಂದೂ ನಮ್ಮ ದೇಶವನ್ನು "ಭಾರತಮಾತೆ" ಎಂದು ಹೆಸರಿಸಿ ಕೊಂಡಾಡಿದ್ದೂ ಕೊಂಡಾಡಿದ್ದೆ!. ಒಂದರೆಗಳಿಗೆ ಯೋಚಿಸಿ ನೋಡಿ ನಮ್ಮ ಸುತ್ತ ಮುತ್ತ ಸಮಾಜದಲ್ಲಿ ಮಡುಗಟ್ಟಿರುವ ಅಸಹ್ಯ, ದುಷ್ಟ, ವಿಕೃತ ಮನಸ್ಸಿನ ಮಂದಿಗಳ ಕಡೆ ಒಮ್ಮೆ ಕಣ್ಣು ಹಾಯಿಸಿ ನೋಡಿ. ಹೆಣ್ಣಿನ ಸ್ಥಾನಮಾನ ಇಂದು ಏನಾಗಿದೆ?. ಬಾಲೆಯೋ, ವೃದ್ಧೆಯೋ, ಯಾರಾದರೂ ಸರಿ. ಅವಳ ಮಾನ, ಪ್ರಾಣ ಕ್ರೂರಿಗಳ ಕೈ ಹಿಡಿತದಲ್ಲಿ ಸಿಕ್ಕಿಕೊಂಡು ಛಿದ್ರ-ಛಿದ್ರವಾಗಿದೆ. 'ಕಲಿಯುಗ' ಎಂದು ಕಲಿ ಪುರುಷನಿಗೆ ಕಳಂಕ ಹೊರಿಸಿ ಕೈತೊಳೆದು ಹೋಗುವವರೇನು ಕಡಿಮೆ ಸಂಖ್ಯೆಯಲ್ಲಿಲ್ಲ.



ಇದೇನು ಈ ಯುಗಕ್ಕೆ ಹೊಸದು ಎಂದು ಭಾವಿಸಬೇಡಿ. ಅಥವಾ ನಮ್ಮ ರಾಜ್ಯಕ್ಕೊ ಅಥವಾ ದೇಶಕ್ಕೊ ಸೀಮಿತ ಎಂಬ ಭ್ರಮೆಯಲ್ಲಿದ್ದೀರೇನು? ಛೇ! ಕಾಲಾನುಕಾಲದಿಂದ ಹೆಣ್ಣಿಗೆ ಎರಡನೆಯ ಸ್ಥಾನ. ಅವಳನ್ನು ಹೊಗಳುವವರಿಗಿಂತ, ತೆಗಳುವವರ ಸಂಖ್ಯೆ ಅಧಿಕ. ಅವು ತಲೆ ಎತ್ತಿ ನಿಲ್ಲದಂತೆ ಹೆಜ್ಜೆ ಹೆಜ್ಜೆಗೂ ತೊಂದರೆಗಳು, ತಾಕಲಾಟಗಳು, ಕಳಂಕಗಳು ಕಾದಿರುತ್ತವೆ. ಅವಳ ಮೇಲೆ ಅಕ್ರಮ, ಅವಮಾನ ಹೇರಲ್ಪಡುತ್ತಿದೆ. ಒಂದೇ, ಎರಡೇ? ಮಧ್ಯ ಪ್ರದೇಶದಲ್ಲಿ ಯೌವನ ಸ್ತ್ರೀಯರ ಮಾರಾಟ, ಕರ್ನಾಟಕದಲ್ಲಿ ಧರ್ಮದ ಮೊಹರು ಹಾಕಿಸಿಕೊಂಡಿರುವ ದೇವದಾಸಿ ಪದ್ಧತಿ, ವೇಶ್ಯಾವೃತ್ತಿಯಲ್ಲದೆ ಮತ್ತೇನು? 'ವರದಕ್ಷಿಣೆ' ಇದು ಮತ್ತೊಂದು ಕಾಯಿಲೆ. ಸಮಾಜಕ್ಕೆ ಅಂಟಿಕೊಂಡ ಅಂಟುಜಾಡ್ಯ! ಇದನ್ನೆಲ್ಲಾ ಕಂಡ ಹೆಣ್ಣು ರೊಚ್ಚಿಗೆದ್ದು, ವಿದ್ಯಾವಂತಳಾಗಿ ತನ್ನನ್ನು ತಾನೇ ಸಬಲ (empowerment)ಳನ್ನಾಗಿ ರೂಪಿಸಿಕೊಂಡು ಆರ್ಥಿಕ ನೆಲಗಟ್ಟಿನಲ್ಲಿ ತಳವೂರಿ, ತನ್ನದೇ ಆದ ಅನನ್ಯತೆ (Independent) ಜಗತ್ತಿಗೆ ತಿಳಿಯಪಡಿಸಬೇಕೆಂದು ಕಂಕಣಬದ್ಧಳಾಗಿ ಹೊರಟು ನಿಂತಳು. ಹಾದಿಯಲ್ಲಿ ಬರೀ ಕಲ್ಲು-ಮುಳ್ಳು.. ಇದೇ ಅವಳಿಗೆದಿರಾಯಿತು!.

ವಿವಿಧ ಕ್ಷೇತ್ರಗಳಲ್ಲಿ ಎಲ್ಲವನ್ನೂ ಎದುರಿಸಿ, ಎತ್ತರಕ್ಕೆ ಏರಿದವರ ಸಂಖ್ಯೆ ಬೆರಳೆಣಿಕೆಯಷ್ಟು ಎಂಬುದು ಎಲ್ಲರಿಗೂ ತಿಳಿದ ವಿಷಯ. ಇದು ಇಂದು ನಿನ್ನೆಯದಲ್ಲ. ರಲ್ಲಿ ಎಲ್ಲೋ ಓದಿದ ದಕ್ಷಿಣ ಕೊರಿಯಾದ ಓರ್ವ ದೇವತಾ ಶಾಸ್ತ್ರಜ್ಞನ ಪದ್ಯ ನೆನಪಿಗೆ ಬಂದಿತು. ಇದು ಒಂದು ಹೆಣ್ಣು ಮಗುವಿನ ರೋಧನದ ಧ್ವನಿ....

"ನಾನು ಜನಿಸಿದಾಗ ಗಾನಕ್ಕೆ ಬದಲಾಗಿ ತಂಗಾಳಿಯೊಡನೆ ವ್ಯಸನವು ಮಿಲಿನವಾಗಿತ್ತು
ನನ್ನನ್ನು ನೋಡಿ ಮುದ್ದಿಸಲು ಯಾರೂ ಬರಲಿಲ್ಲ
ನನ್ನ ಯೋಗಕ್ಷೇಮ ನೋಡಿಕೊಳ್ಳಲು ಯಾರೂ ಮುಂದೆ ಬರಲಿಲ್ಲ
ಕೊಲ್ಲು ಕೊಲ್ಲು ಕೊಲ್ಲು ಎಂದು ಕಿರುಚಿದರು ನನ್ನ ತಂದೆ
ಪ್ರಪಂಚದ ಮೂಲೆ ಮೂಲೆಗೂ ಕೇಳಿಸುವಂತೆ ಘೋಷಿಸಿದರು.
ಯಾಕೆಂದರೆ ನಾನು ಒಂದು ಹೆಣ್ಣು ಮಗು
ಈ ಧರೆಯಲ್ಲಿ ಜನ್ಮ ತಾಳಿದಾಗ ನನಗಾಗಿ ಯಾರೂ ಹಾಡಲಿಲ್ಲ!"

'ಹೆಣ್ಣು' ಎಂದಕೂಡಲೇ ಅವಳ ಕಣ್ಣಲ್ಲಿ ನೀರು ಜಿನುಗುತ್ತಲೇ ಬಂದಿದೆ. ಅದಿರಲಿ, ಇತ್ತೀಚಿನ ದಿನಪತ್ರಿಕೆಯಲ್ಲಿ ಓದಿದ ಈ ಸುದ್ದಿ ಬಗ್ಗೆ ಏನು ಹೇಳಲಿ? ಓರ್ವ 23 ವರುಷದ ಜರ್ಮನ್ ವಿದ್ಯಾರ್ಥಿನಿಯನ್ನು (ಅಂದು ಅವಳ ಹುಟ್ಟಿದ ಹಬ್ಬ - ನವೆಂಬರ್ 15) ಅವಳ ಧೈರ್ಯ, ಸ್ಥೈರ್ಯವನ್ನು ಮೆಚ್ಚಿ ಜರ್ಮನಿಯಲ್ಲಿ ಲಕ್ಷ ಲಕ್ಷ ಜನರು ಬೀದಿಗಿಳಿದು ಅವಳಿಗೆ "ರಾಷ್ಟ್ರೀಯ ಶೌರ್ಯ ಪದಕ" (National Bravery Award) ನೀಡಲೇಬೇಕೆಂದು ಒತ್ತಾಯ ಮಾಡಿದರು. ಎಲ್ಲರ ಕೈನಲ್ಲೂ ಹಚ್ಚಿಟ್ಟ ಮೇಣದ ದೀಪಗಳು' ಮೆಕ್‌ಡೊನಾಲ್ಡ್ (McDonald)ನಲ್ಲಿ ಕುಡಿದಿದ್ದ ಕೆಲವರು ಇಬ್ಬರು ಹೆಂಗಸರನ್ನು ಅವಾಚ್ಯ ಶಬ್ದಗಳಿಂದ ಪೀಡಿಸಿ, ಕಿರುಕುಳ ಕೊಡುತ್ತಿದ್ದ ದೃಶ್ಯವನ್ನು ನೋಡಿದ ಇವಳು ತನ್ನ ಪ್ರಾಣವನ್ನು ಒತ್ತೆಯಿಟ್ಟು,

✍ ವನಜರಾಜನ್

ಅಸಹಾಯವಾಗಿ ಅರಚುತ್ತಿದ್ದ ಆ ಇಬ್ಬರನ್ನೂ ಕಾಪಾಡಿದಳು. ಆದರೆ, ಆ ದುಷ್ಟರಲ್ಲೊಬ್ಬ ಬ್ಯಾಟ್‌ನಿಂದ ಅವಳನ್ನು ಹೊಡೆದು ಕೊಂದು ಕೆಡವಿದುದು. ಅಂದು ಅವಳು ತನ್ನ 23 ನೇಯ ಹುಟ್ಟುಹಬ್ಬವನ್ನು ಆಚರಿಸಲೇ ಇಲ್ಲ.

'ಹೆಣ್ಣು', ಅವಳು ಎಲ್ಲಾ ರೀತಿಯ ಎಡರು-ತೊಡರುಗಳನ್ನೆದುರಿಸಿ ಸಾಧನೆಯ ಶಿಖರವನ್ನೇರಿದಾಗ ಬೆನ್ನು ತಟ್ಟಿ, ತಲೆಸವರಿ, ಪ್ರೋತ್ಸಾಹಿಸುವವರು ಎಷ್ಟು ಮಂದಿ ಈ ಜಗತ್ತಿನಲ್ಲಿದ್ದಾರೆ. ಅದೂ ವಿಜ್ಞಾನ, ಸಂಶೋಧನಾ ಕ್ಷೇತ್ರದಲ್ಲಿ? ಹಳೆಯ ದಿನಪತ್ರಿಕೆಯ ಒಂದು ಪುಟದಲ್ಲಿ ಓದಿದ ಸುದ್ದಿ, ನನ್ನನ್ನು ಬಹ ಕಾಲದಿಂದ ಕಾಡಿಸುತ್ತಿತ್ತು. ಅದನ್ನು ಓದಿದಾಗ ಹೃದಯ ಹಿಂಡಿದಂತಾಗಿತ್ತು. ಆ ವಿಷಯದ ಬಗ್ಗೆ ಬರೆಯಲೇಬೇಕೆಂದೆನಿಸಿತು. ಇದು ಇಂದು ನಿನ್ನೆಯ ಸುದ್ದಿ ಅಲ್ಲ. 2005ನೇಯ ವರ್ಷವನ್ನು 'ಭೌತಶಾಸ್ತ್ರ ವರ್ಷ' (Physics year) ಎಂಬುದಾಗಿ ವಿಶ್ವಸಂಸ್ಥೆ ಘೋಷಣೆ ಮಾಡಿದುದು ಎಲ್ಲರಿಗೂ ತಿಳಿದ ವಿಷಯ. ಹಾಗೂ ಹಳೆಯ ಸುದ್ದಿ! (Madam Marie and pirre curie). ಮೇರಿ ಹಾಗೂ ಅವಳ ಪತಿ ಪಿಯರಿ ಕ್ಯೂರಿ 'ರೇಡಿಯೋ ಆ್ಯಕ್ಟಿವಿಟಿ' (Radio Activity)ಯ ಬಗ್ಗೆ ದೀರ್ಘ ಕಾಲ ಸಂಶೋಧನೆ ನಡೆಸಿದ್ದರು. ವಿಜ್ಞಾನ ಕ್ಷೇತ್ರದ ಈ ಸಾಧನೆಗಾಗಿ ಅವರಿಗೆ ಅತ್ಯುನ್ನತ 'ನೋಬೆಲ್' ಪ್ರಶಸ್ತಿ ದೊರಕಿತು. ದುರದೃಷ್ಟವಶಾತ್ ಪಿಯರಿ ಕ್ಯೂರಿ ಒಂದು ರಸ್ತೆ ಅಪಘಾತದಲ್ಲಿ ತೀರಿಕೊಂಡರು. ಆ ನಂತರ ಮೇರಿಯ ಬಾಳು ದುಃಖಮಯವಾಯಿತು. ಅವಳು ಮೇಲೆ ಬರಲು ಅವಳೊಡನೆ ಕೆಲಸ ಮಾಡುತ್ತಿದ್ದವರೂ ಹಾಗೂ ಪತ್ರಿಕೆಗಳು (Press) ಒಂದರ ನಂತರ ಮತ್ತೊಂದು ಅಡಚಣೆಗಳನ್ನು ಒಡ್ಡಿ ಯಾವುದೇ ರೀತಿಯ ಸಹಾಯ, ಸಹಕಾರ ನೀಡಲಿಲ್ಲ. ಹಗಲು ರಾತ್ರಿ ಎನ್ನದೆ ಪ್ರಯೋಗಶಾಲೆಯಲ್ಲಿ ಸಂಶೋಧನಾ ಕಾರ್ಯ ಕೈಗೊಂಡರೂ ಸಹಿಸದ ಪತ್ರಿಕೆಗಳು ಅವಳ ಮೇಲೆ ಗೂಬೆ ಕೂರಿಸಿ ಅಪಪ್ರಚಾರ ಮಾಡಿ ಅವಳನ್ನು ಕುಗ್ಗಿಸಿದರು. ಹೀಗಿದ್ದಾಗ ಈ ಸಂದರ್ಭವನ್ನು ಬಳಸಿಕೊಂಡು ಅವಳ ವ್ಯಕ್ತಿಗತ ಜೀವನಕ್ಕೂ ಸಾಕಷ್ಟು ಮಸಿ ಬಳೆದರು. ಏತನ್ಮಧ್ಯೆ

ಮೇರಿ ಕ್ಯೂರಿಗೆ ಅನಿರೀಕ್ಷಿತವಾಗಿ ಎರಡನೆಯ ಬಾರಿ 'ನೋಬೆಲ್' ಪ್ರಶಸ್ತಿ ದೊರಕಿತು. ಎಲ್ಲಿಯೂ ಅವಳಿಗೆ ಗೌರವವಾಗಲೀ, ಮಾನ್ಯತೆಯಾಗಲೀ ಅಂದಿನ ಸಮಾಜ ನೀಡಲಿಲ್ಲ. ಅವಳ ಮನಸ್ಸಿನ ಆಳದಲ್ಲಿ ದುಃಖ ಮಡುಗಟ್ಟಿ, ನಿರಾಶೆ ಅವಳನ್ನು ಪಾತಾಳಕ್ಕೆ ತಳ್ಳಿ, ಸಾವಿನ ಹತ್ತಿರಕ್ಕೆ ಕರೆದೊಯ್ಯಿತು. ತನಗೇನೂ ಆಗಿಲ್ಲವೆಂದು ಹೊರಗಿನ ಪ್ರಪಂಚಕ್ಕೆ ತೋರ್ಪಡಿಸಿದರೂ ಸಹ ಒಳಗೇ ಬೆಂದು, ಬಸವಳಿದಳು.

ಅದೇ ಸಮಯದಲ್ಲಿ ಜಗತ್‌ಪ್ರಸಿದ್ಧ ವಿಜ್ಞಾನಿ 'ಐನ್‌ಸ್ಟೀನ್'ರವರು (A-Einstein) (1910) 'ಪ್ರಾಗ್' (Prague) ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು. ಈ ಮೊದಲೇ ಒಮ್ಮೆ ಅವರು ಬ್ರಸಲ್ಸ್ (Brussels) ನಲ್ಲಿ ಮೇಡಂ ಕ್ಯೂರಿ ಯನ್ನು ಭೇಟಿಯಾಗಿದ್ದರು. ಅವಳ ಸ್ವಸಾರ್ಥ್ಯ, ಬುದ್ಧಿಶಕ್ತಿ ಹಾಗೂ ಸೃಜನಶೀಲತೆಯನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ದ್ವೇಷ ಅಸೂಯೆ ತುಂಬಿದ ಪತ್ರಿಕೆಗಳು ಉಗುಳಿದ 'ವಿಷ' ವಿಶ್ವದಾದ್ಯಂತ ಹಬ್ಬಿದ್ದನ್ನು ಕೇಳಿ ಐನ್‌ಸ್ಟೀನ್‌ಗೆ ಸಹಿಸಲಾಗಲಿಲ್ಲ. ಅವರು ಮೇರಿಗೆ ಬರೆದ ಕಾಗದದ ಒಕ್ಕಣೆ, ಓದಿ ನೋಡಿ...

ಗೌರವಾನ್ವಿತ ಮೇಡಂ ಕ್ಯೂರಿ,

ನನ್ನ ಈ ಕಾಗದ ಓದಿ ನಗಬೇಡಿ. ಕೆಟ್ಟ ಸ್ವಭಾವದ, ಕೀಳು ಮನಸ್ಸಿನ ಮಂದಿ ನಿನ್ನನ್ನು ನಡೆಸಿಕೊಂಡ ರೀತಿ ನೋಡಿ ಕೋಪದಿಂದ ನನ್ನ ಮೈ ಉರಿದುಹೋಯಿತು. ನನ್ನ ಈ ರೋಷವನ್ನು ವ್ಯಕ್ತಪಡಿಸದೆ ಬೇರೆ ದಾರಿಯೇ ಇರಲಿಲ್ಲ. ನಿನ್ನ ಸತ್ಯತೆ, ಸೃಜನತೆ, ಬುದ್ಧಿವಂತಿಕೆಯನ್ನು ಮನಃಪೂರ್ವಕವಾಗಿ ನಾನು ಮೆಚ್ಚಿಕೊಂಡಿದ್ದೇನೆ. ನಿನ್ನನ್ನು ಈ ಹಿಂದೆ ಬ್ರಸಲ್ಸ್‌ನಲ್ಲಿ ಭೇಟಿಯಾಗಿದ್ದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ. ಈ ವಿಷ ಹಾವುಗಳನ್ನು ತಳ್ಳಿಹಾಕಿ. ನೀವು ಮತ್ತು ಲಾಂಜಿವಿನ್ ಮತ್ತೋರ್ವ ಪ್ರಖ್ಯಾತ ಫ್ರೆಂಚ್ ವಿಜ್ಞಾನಿ ನಮ್ಮೊಡನೆ ಇದ್ದೀರಿ ಎಂದರೆ ಸಂತೋಷಪಡದೇ ಇರಲು ಸಾಧ್ಯವೇ ಇಲ್ಲ. ಇದೇ ರೀತಿ ಕೆಟ್ಟ ಮಂದಿಯ ಮಾತುಗಳು ಮುಂದುವರಿದಿದ್ದೇ ಆದರೆ ಅದನ್ನು ಅಲಕ್ಷ್ಯಿಸಿ ಯಾವ ಮಾತಿಗೂ ಕಿವಿಗೊಡಬೇಡಿ. ಪತ್ರಿಕೆಗಳನ್ನು ಓದಲೇಬೇಡಿ.

ಸ್ನೇಹಪೂರ್ವಕವಾಗಿ,

ನಿಮ್ಮ ಅಭಿಮಾನಿ

ಎ. ಐನ್‌ಸ್ಟೀನ್

'ಪ್ರಾಗ್' 23 ನವೆಂಬರ್ - 1911

ಇಂದಿಗೂ 'ಸಂಶೋಧನ ವಿಜ್ಞಾನ' ಕ್ಷೇತ್ರದಲ್ಲಿ 'ಸ್ತ್ರೀ' ವಿಜ್ಞಾನಿಗಳ ಸ್ಥಿತಿಗತಿಯಲ್ಲಿ (Scintific Research) ಏನೇನೂ ಬದಲಾವಣೆ ಕಾಣುತ್ತಿಲ್ಲ ಎಂದು ಹೇಳಲು ಖೇದವಾಗುತ್ತದೆ. ಹೆಚ್ಚಿನ ಪ್ರಚಾರಕ್ಕೆ ಹಾತೊರೆಯದೆ, ತಾವೇ ತಾವಾಗಿ ಸಂಶೋಧನೆಗಳನ್ನು ಸಂಶೋಧನೆಗಳನ್ನು ಹಗಲು-ರಾತ್ರಿ ಎನ್ನದೆ, ಪ್ರಯೋಗ ಶಾಲೆಗಳಲ್ಲಿ ನಡೆಸುತ್ತಿರುವ (ವಿಶ್ವದಾದ್ಯಂತ) 'ಸ್ತ್ರೀ' ವಿಜ್ಞಾನಿಗಳಿಗೆ 'ಅಹಂಕಾರ' ಅನ್ನೊ ಹಣೆಪಟ್ಟಿ ಅಂಟಿರಿಸುವುದು ಯಾವ ನ್ಯಾಯ?.

ಯಾಕೆ ಹೀಗೆ? ಕೀಚಕ, ದುಸ್ಯಾಸನರಂತವರು ಮಕ್ಕಳೆನ್ನದೆ, ಮುದಿಯರೆನ್ನದೆ ಹೆಣ್ಣಿನ ಮೇಲೆ ಲೈಂಗಿಕ ದೌರ್ಜನ್ಯಗಳನ್ನು ನಡೆಸುತ್ತಿರುವ ಸುದ್ದಿ ಪ್ರತಿನಿತ್ಯ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತೇವೆ. ವಾಹಿನಿಗಳಲ್ಲಿ ಇಡೀ ದಿನ ಅದೇ ಸಮಾಚಾರಗಳ ಬಗ್ಗೆ ಚರ್ಚೆ ಕೇಳೋಕ್ಕೆ ಅಸಹ್ಯವಾಗುತ್ತದೆ. ಮುಂಬರುವ ದಿನಗಳು ಹೇಗಿರಬಹುದು?. ಕಲ್ಪನೆ ಮಾಡಿಕೊಂಡರೂ ಗಾಭರಿಯಾಗುತ್ತದೆ. ನೈತಿಕ ಮೌಲ್ಯಗಳು ಮಾಯವಾಯಿತೇ? ಆ ಪರಮಾತ್ಮನೇ ಪರಿಹಾರವನ್ನು ಸೂಚಿಸಬೇಕು. ನಮಗೆ ದಾರಿ ತೋರಿಸಬೇಕು. ಕಾಮುಕರು ಅಳಿಯಬೇಕು. ಹೆಣ್ಣಿಗೆ ಸಂಪೂರ್ಣ ರಕ್ಷಣೆ ಸಿಗಬೇಕು. ಆದರೆ, ಎಂದು ಬರುವುದು ಆ ದಿನ?. ಪರಮಾತ್ಮನನ್ನು ಪ್ರಾರ್ಥಿಸಿ ಕಾದು ಕುಳಿತುರುದು.

(ಹೆಣ್ಣುಮಗಳು, ಹೆಂಡತಿ, ತಾಯಿ ಅಜ್ಜಿ)

# ನೀನಿರದಿರಲೂ ನಾನಿರುವೆ ಹೀಗೆ

ನನ್ನೊಳಗೆ ನಾನಿಲ್ಲ ಎಲ್ಲಿ ಅಲೆದರೂ ಸಲ್ಲ
ನಿನ್ನ ನೆನಿಕೆ ಇರದೆ ಗಳಿಗೆಗೆ ಗತಿಯಿಲ್ಲ
ನಿನ್ನದಾಗಿದೆ ಎಲ್ಲಾ! ನನ್ನದೆಂಬುದೆ ಇಲ್ಲ
ನೀನಿರದಿರಲೂ ನಾನಿರುವೆ ಹೀಗೆಯೇ...
ಮರ ಮರಳಿ ಓದುವ ಪ್ರೀತಿ ಬರಹ ಜೊತೆಯಿರಲು.

ಕನ್ನಡಿಯೊಳಗಣ ಬಿಂಬ ನನ್ನದಾಗಿರಲಿಲ್ಲ
ಮತ್ತೊರಸಿ ನೋಡಿದರೆ ನಿನ್ನ ರೂಪಿದೆಯಲ್ಲಾ
ಬಗೆಯೊಳಗೆ ಕುದಿಯುವ ದುಗುಡದಲಿ ತರವಿಲ್ಲ
ನೀನಿರದಿರಲೂ ನಾನಿರುವೆ ಹೀಗೆಯೇ...
ಕ್ಷಣ ಬಿಡದೆ ಆಡುವ ಉಸಿರಲಿ ನೀನಿರಲು.

ನಡೆವ ದಾರಿ ಬೆಳಗಲಿಲ್ಲ. ಬೆಳೆಯುವಲ್ಲಿ ಹರಿಯಲಿಲ್ಲ
ಹಾತೊರೆವ ಬದುಕಿಗೆ ತಣಿಸುವ ಮಣ್ಣಿಲ್ಲ
ಆಗಾಗ್ಗೆ ಕಾಡುವ ಬೇತಾಳ, ಉತ್ತರಕ್ಕೆ ವಿಕ್ರಮನಿಲ್ಲ
ನೀನಿರದಿರಲೂ ನಾನಿರುವೆ ಹೀಗೆಯೇ...
ಬದುಕು ಕೊಡಮಾಡಿದ ಧೀರತೆಯ ಕಂಬ ಜೊತೆಯಿರಲು.

ಮಂಜನೇರಿದ ಕಣ್ಣಾಲಿ ಬತ್ತಲಿಲ್ಲ
ಬಿಳಿಯ ಮೋಡ ಮಳೆಯ ತರಲಿಲ್ಲ
ಗಾರೆದ್ದ ಒಣ ನೆಲದ ಕತೆಯೇ ಎಲ್ಲಾ
ನೀನಿರದಿರಲೂ ನಾನಿರುವೆ ಹೀಗೆಯೇ...
ಮತ್ತೆ ಕಾಣುವ ಭರವಸೆ ಜೊತೆಯಿರಲು.

ತಮವ ತೆಗೆವ ಪೂರ್ಣ ತೇಜನಿಲ್ಲ
ಸರಸ ಸಲ್ಲಾಪಕ್ಕೆ ಜಂಟಿ ದನಿಯಿಲ್ಲ
ಜಗವೇ ಒಳಸುಳಿದು ಹಟ ಹೂಡಿದೆಯಲ್ಲಾ
ನೀನಿರದಿರಲೂ ನಾನಿರುವೆ ಹೀಗೆಯೇ
ಹೃದಯ ಕರಗಿಸುವೊಲವು ಜೊತೆಗಿರಲು.

ಇಂದೋ ನಾಳೆಯೋ ಇರುವಿನ ಭರವಸೆಯಿಲ್ಲ
ಕೊಟ್ಟುಳಿದುದರಲಿ ಬರೀ ಸಂಜ್ಞೆ, ನುಡಿಗಟ್ಟಿಲ್ಲ
ಭಾಷೆಯೊಡನೆ ಕೂಡಿ ಬರೆದ ಬರಹ ನಿನ್ನದಾಗಿದೆಯಲ್ಲಾ
ನೀನಿರದಿರಲೂ ನಾನಿರುವೆ ಹೀಗೆಯೇ...
ನನ್ನೇಕಾಂತಕ್ಕೆ ಕವಿತೆಗಳು ಜೊತೆಯಿರಲು



✍ಅನಿತಾ ಪಿ. ಪೂಜಾರಿ, ತಾಕೊಡೆ

# ‘ಹಸ್ತಾಂತರ’ ಬಿ. ಜನಾರ್ದನ ಭಟ್ ಅವರ ಓದಲೇಬೇಕಾದ ಕಾದಂಬರಿ

ಬಿ. ಜನಾರ್ದನ್ ಭಟ್ ಇವರ ‘ಉತ್ತರಾಧಿಕಾರ’ದ ನಂತರ ನಾನು ಅತ್ಯಂತ ಆಸಕ್ತಿಯಿಂದ ಓದಿ ಮುಗಿಸಿದ ಅವರ ಇನ್ನೊಂದು ಕಾದಂಬರಿ ‘ಹಸ್ತಾಂತರ’ ಈ ಕಾದಂಬರಿ ಕೂಡಾ ದಕ್ಷಿಣ ಕನ್ನಡ ಜಿಲ್ಲೆಯ ‘ನಡುಕಣಿ’ ಎಂಬ ಊರಿನ ಸುಮಾರು 1960ರಿಂದ 1975ರ ವರೆಗಿನ ಕಥಾನಕವನ್ನು ಹೊಂದಿದ್ದು ಓದಿಸಿಕೊಂಡು ಹೋಗುತ್ತದೆ. ಕಾದಂಬರಿಯುದ್ದಕ್ಕೂ ಉತ್ತರಾಧಿಕಾರಿಯ ಪ್ರಶ್ನೆ ಇಣುಕಿ ಹಾಕಿದ್ದು ಇಲ್ಲಿ ಹಸ್ತಾಂತರ ಪ್ರಕ್ರಿಯೆಗಳ ಮೂಲಕ ನಿರ್ದಿಷ್ಟ ಸಮಾಜವೊಂದರ ನಿರ್ದಿಷ್ಟ ಕಾಲಘಟ್ಟದ ಬದುಕನ್ನು ಓದುಗರ ಆಸಕ್ತಿಯನ್ನು ಕಟ್ಟಿ ಹಾಕುವಂತೆ ಚಿತ್ರಿಸಿದ್ದಾರೆ. ಭೂಮಿ ಹಕ್ಕಿನ ಉತ್ತರಾಧಿಕಾರದ ಪ್ರಶ್ನೆ ಇಣುಕಿ ಹಾಕಿದ್ದು ಇಲ್ಲಿ ಹಸ್ತಾಂತರ ಪ್ರಕ್ರಿಯೆಗಳ ಮೂಲಕ ನಿರ್ದಿಷ್ಟ ಸಮಾಜವೊಂದರ ನಿರ್ದಿಷ್ಟ ಕಾಲಘಟ್ಟದ ಬದುಕನ್ನು ಓದುಗರ ಆಸಕ್ತಿಯನ್ನು ಕಟ್ಟಿಹಾಕುವಂತೆ ಚಿತ್ರಿಸಿದ್ದಾರೆ. ಭೂಮಿ ಹಕ್ಕಿನ ಉತ್ತರಾಧಿಕಾರದ ಪ್ರಶ್ನೆ ಇಲ್ಲಿಯ ಒಂದು ಆಯಾಮವಾಗಿದ್ದು ಇಲ್ಲಿ ಬರುವ ಕಾಲ್ಪನಿಕ ಪಾತ್ರಗಳು ನಡುಕಣಿಯಲ್ಲಿ ಬಾಳಿ ಬದುಕಿದ, ಬದುಕುವ ಸಜೀವ ಮಾನವರಂತೆ ಕಂಡು ಬರುವುದು ಕಾದಂಬರಿಕಾರರ ಲೇಖನಿಯ ಹೆಚ್ಚುಗಾರಿಕೆಯಾಗಿದೆ. ಈ ಕಾದಂಬರಿಯಲ್ಲಿಯ ಕಥಾನಕ ಕೂಡ ಉತ್ತರಾಧಿಕಾರ ಕಾದಂಬರಿಯಲ್ಲಿ ಬರುವಂತೆ ದಕ್ಷಿಣ ಕನ್ನಡ ಪ್ರದೇಶದ ಸುತ್ತಮುತ್ತಲಿನ ಊರುಗಳಲ್ಲಿ ನಡೆಯುತ್ತವೆ. ಉದಾಹರಣೆಗೆ ತಾಳಿಪಾಡಿ, ಸಾಂತೂರು, ಕಾಂತಾವರ, ಪಲಿಮಾರು ಅಲ್ಲದೆ ತುಳು ಶಬ್ದಗಳು ಇಲ್ಲಿಯ ನಡಾವಳಿಗಳು ಕಂಡುಬರುತ್ತವೆ. ಯಕ್ಷಗಾನ, ನಾಟಕ, ಕೋಳಿ ಅಂಕ, ಅಗೆಲು ಮುಂತಾದ ಪ್ರಕ್ರಿಯೆಗಳ ಜೊತೆ ಕಥೆ ಮುಂದಕ್ಕೆ ಸಾಗುತ್ತದೆ. ಉತ್ತರಾಧಿಕಾರಿ ಜೊತೆಗೆ ಈ ಕಾದಂಬರಿಯನ್ನು ಲೇಖಕರು ಬರೆದಿದ್ದಾರಾದರೂ, ಇಲ್ಲಿ ಬರುವ ವಿಷಯಗಳೇ ಓದುಗರ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಈ ಕಾದಂಬರಿಯಲ್ಲಿ ಬರುವ ಗೂರಲ ಗೋಪಾಲದಾಸರ ಕೀರ್ತನೆಯನ್ನು ರಚಿಸಿಕೊಟ್ಟವರು. ಅಷ್ಟವಧಾನಿ ಉಮೇಶ ಗೌತಮ ನಾಯಕರೆಂದು ಕಾದಂಬರಿಕಾರರು ಹೇಳಿಕೊಂಡಿದ್ದಾರೆ. ಈ ನಾಯಕರ ಪ್ರತಿಭೆಯನ್ನು ನಮ್ಮ ಕ.ಸಾ.ಪ. ಮಹಾರಾಷ್ಟ್ರ ಘಟಕ ಆಯೋಜಿಸಿದ್ದ ಸಾಹಿತ್ಯ ಸಮ್ಮೇಳನದಲ್ಲಿ (2015) ಕಂಡು ಅನುಭವಿಸಿದವನು ನಾನು. ಅದು ಇಲ್ಲಿ ಮತ್ತೊಮ್ಮೆ ಪುನರಾವರ್ತನೆಗೊಂಡಿದೆ.

ಈ ಕಾದಂಬರಿಯಲ್ಲಿ ದೇವಸ್ಥಾನ ಅದರ ಮಹತ್ವ ದೈವಗಳ ಮೇಲಿನ ನಂಬಿಕೆ, ಮೈ ಮೇಲೆ ಪ್ರೇತ ಬರುವುದು, ಅದನ್ನು ಓಡಿಸುವುದು, ನಾವು ಉಳುವ ಭೂಮಿ ಅದು ಬೇರೆಯವರಿಗೆ ಸೇರಿದ್ದಾದರೆ ಅದು ತಮಗೆ ಸಿಗುವ ಹಾಗೆ ಡಿಕ್ಲರೇಶನ್ ಕೊಡುವುದು, ಊರಿನ ಒಂದು ಪ್ರದೇಶದಲ್ಲಿ ಬೇರೆ ಬೇರೆ ಸಮುದಾಯಗಳ ಮಧ್ಯೆ ಇರಬಹುದಾದ ಕೊಡು ಕೊಳ್ಳುವಿಕೆ ಹೀಗೆ ಒಂದು ಸಮಗ್ರ ಚರಿತ್ರೆಯೆ ಇಲ್ಲಿ ಬಂದಿದ್ದು, ಒಂದು ಪುಟ್ಟ ವಿಶ್ವವೆ ನಮ್ಮ ಮಂದೆ ಬಂದು ನಿಂತುಕೊಂಡು ತನ್ನ ಕಥೆಯನ್ನು ಹೇಳಿದ ಭಾಸವಾಗುತ್ತದೆ.

ತೇಜಸ್ವಿ ಒಳ್ಳೆಯ ಮನಸ್ಸಿನ ಬ್ರಾಹ್ಮಣ ಗೋವಿಂದಾಚಾರ್ಯ ನಡುಕಣಿಯ ದೇವರು ಮಹಾಲಿಂಗೇಶ್ವರನಿಗೆ ಮಹಾಪೂಜೆ ಮಾಡುವಲ್ಲಿಗೆ, ಪ್ರಾರಂಭವಾಗುವ ಕಾದಂಬರಿ, ಗುರು ರಾಮಾಚಾರ್ಯರು ತನ್ನ ಶಿಷ್ಯ ಸುಬ್ರಮಣ್ಯನಿಗೆ ಚೆನ್ನಾಗಿ ಬಾಳೆಂದು ಆಶೀರ್ವದಿಸುವಲ್ಲಿ ಕಾದಂಬರಿಗೆ ಪರದೆ ಬೀಳುತ್ತದೆ. 243 ಪುಟಗಳಲ್ಲಿ ನಡುಕಣಿಯಲ್ಲಿ 15 ವರ್ಷಗಳಲ್ಲಿ ನಡೆಯುವ ಸಾಮಾಜಿಕ, ಧಾರ್ಮಿಕ ರಾಜಕೀಯ ಸ್ಥಿತ್ಯಂತರಗಳನ್ನು ಅರ್ಥವತ್ತಾಗಿ ತೆರೆದಿಡುವ ಕಾದಂಬರಿ ಒಂದು ಹಳ್ಳಿಯ ಹತ್ತು ಜನರ, ಹತ್ತು ಹಲವಾರು ಆಯಾಮಗಳನ್ನು ನಮ್ಮೆದುರು ತೆರೆದಿಡುವುದರಲ್ಲಿ ಸಫಲಗೊಂಡಿದೆ.

ಕಾದಂಬರಿ ಪ್ರಾರಂಭವಾಗುವಲ್ಲಿ ಗೋವಿಂದಾಚಾರ್ಯರನ್ನು ಭೇಟಿಯಾಗುವ ಕಾಲೇಜಿನ ಪ್ರೊಫೆಸರ್ ಪಿ.ಎಚ್.ಡಿ. ವಿದ್ಯಾರ್ಥಿ ಕೃಷ್ಣರಾಜ ಎಡುಗೆ ಕುಟ್ಟಿಪಾಡಿ ಭಕ್ತ ಶ್ರೇಷ್ಠ ಗೊರಲ ಗೋಪಾಲದಾಸರ ಬದುಕು ಮತ್ತು ಅವರು ರಚಿಸಿದ ದಾಸರ ಪದಗಳ ಬಗ್ಗೆ ಸಂಶೋಧನೆ ನಡೆಸಲು ಬರುತ್ತಾನೆ. ಅಲ್ಲಿದ್ದುಕೊಂಡು ಅವನು ಸಾಕಷ್ಟು ಉಪಯುಕ್ತ ಮಾಹಿತಿಗಳನ್ನು ಕಲೆಹಾಕುತ್ತಾನೆ. ಆ ಊರಿನ ಜನರೊಂದಿಗೆ ಬೆರೆತು ಅಲ್ಲಿದ್ದಷ್ಟು ಕಾಲ ಆ ಊರಿನವನೆ ಆಗಿ ಬಿಡುತ್ತಾನೆ. ಆದರೆ ಆ ವಿಷಯಕ್ಕೆ ಡಾಕ್ಟರೇಟ್ ಪಡೆಯುವ ಅವನ ಕನಸು ನನಸ್ಸಾದರೂ ಆ ಸಂಶೋಧನೆಯ ಥೀಸಿಸ್‌ನ್ನು ಪ್ರಕಟ ಮಾಡಲಾಗದಿರುವುದು ವಿಪರ್ಯಾಸವೆ ಎನ್ನಬೇಕು. ಆದರೆ ಆ ಪಿ.ಎಚ್.ಡಿ. ಥೀಸಿಸನ್ನು ಓದಿ ಅದರಲ್ಲಿದ್ದ ವಿಷಯವನ್ನು ನೋಟು ಪುಸ್ತಕದಲ್ಲಿ ಬರೆದುಕೊಂಡ ಗೂರಲ ರಾಜಶೇಖರನ ಕುಟ್ಟಿಪಾಲ ಭಕ್ತಶೇಷ್ಠ ಕವಿಕುಲ ಪಿತಾಮಹ ಗೂರಲ ಗೋಪಾಲರದಾಸರ ಚರಿತ್ರೆಯನ್ನು ತನ್ನ ಹೆಸರಿನಲ್ಲಿ ಬರೆದು, ಪ್ರಕಟಿಸಿ ಬರ್ಕಾಡಿ ಶಾಶಕ ಎಂ.ಎಸ್. ಪೊಸಾದಿಯವರಿಂದ ಮುನ್ನುಡಿ ಬರೆಸಿ, ಲೋಕಾರ್ಪಣೆಗೊಳಿಸುತ್ತಾನೆ. ಶ್ರಮವಹಿಸಿ ಕ್ಷೇತ್ರಕಾರ್ಯ ಮಾಡಿದ ಕೃಷ್ಣರಾಜ ವಿಟಂಗ ಸುಮ್ಮನೆ ಬಾಯ್ಮುಚ್ಚಿಕೊಂಡಿರಬೇಕಾಗುತ್ತದೆ. ಗೋಪಾಲದಾಸರ ನಿಜವಾದ ಚರಿತ್ರೆ ಶಾಶ್ವತವಾಗಿ ಮುಚ್ಚಿ ಹೋಗುತ್ತದೆ. ಅಲ್ಲದೆ ‘ಸತ್ಯ ಯಾರಿಗೆ ಬೇಕಾಗಿದೆ (ಪುಟ 211) ಎನ್ನುವ ಕಟು ಸತ್ಯ ಇಂದಿನ ಚರಿತ್ರೆಗೆ ಕನ್ನಡಿ ತೋರಿಸುತ್ತದೆ.

ಮೂರು ಭಾಗಗಳಲ್ಲಿ ಹರಿದು ಬಂದಿರುವ ಈ ಕಾದಂಬರಿ, ತುಳುನಾಡಿನ ನಡುಕಣಿ ಹಳ್ಳಿಯ ರಾಜಕೀಯ ಸಾಮಾಜಿಕ ಹಾಗೂ ಧಾರ್ಮಿಕ ಹೀಗೆ ಎಲ್ಲಾ ಆಯಾಮಕ್ಕೆ ಬೆಳಕು ಬೀರಿದೆ. ಅಲ್ಲದೆ ಆಸ್ತಿ ಹಸ್ತಾಂತರ, ಡಿಕ್ಲೆರೇಶನ್‌ನ ವಿವರ ಇಲ್ಲಿ ಅಂದಿನ ಜನಜೀವನವನ್ನು ನಮಗೆ ಮತ್ತೆ ನೆನಪಿಸಿ ಕೊಡುತ್ತದೆ. ತುಳುನಾಡಿನ ಸತ್ಯೊಲು, ವಿಧಿ ನಿಷೇಧಗಳು, ನಾಗದೇವರು, ಬ್ರಹ್ಮ ರಾಕ್ಷಸ, ಬಲ್ಮೆ ಹೇಳುವವರು, ನೀತಿ ನಿಯಮ, ಪ್ರೇತ ಮೈ ಮೇಲೆ ಬರುವುದು, ಅದನ್ನು ಓಡಿಸುವ ರೀತಿ ಭೂಮಿ ಹಕ್ಕಿನ ಹಸ್ತಾಂತರ, ಕೋಳಿ ಅಂಕ, ಹಳ್ಳಿಯ ಜನರ ಜೀವನಕ್ರಮ, ಬೇಸಾಯ ಪದ್ಧತಿ ಎಲ್ಲವೂ ಇಲ್ಲಿ ಬಂದಿದ್ದು ತುಳುನಾಡಿನ ಒಂದು ಸಮಗ್ರ ಚಿತ್ರಣವನ್ನು ಕಾಣಬಹುದಾಗಿದೆ. ತುಳುನಾಡಿನ ಇಂತಹ ಚಿತ್ರಣವನ್ನು ನಾವು ಬಿ. ಜನಾರ್ದನ ಭಟ್ಟರ ಕಾದಂಬರಿಯಲ್ಲಿ ಕಾಣಬಹುದಾಗಿದೆ.

ಈ ಕಾದಂಬರಿಯನ್ನು ಓದತೊಡಗಿದಾಗ ನಾವೆಲ್ಲೊ ತುಳುನಾಡಿನ ಯಾವುದೇ ಹಳ್ಳಿಯ ಸ್ಥಿತ್ಯಂತರವನ್ನು ಓದಿದಂತಾಗುತ್ತದೆ. ಕೊನೆಗೆ ಕ್ಲಾರ್ಕ್ ಸ್ಯಾಮ್ ಕಂಪೆನಿ ನೆಲೆಯೂರಿ ನಡುಕಣಿ ಖಾಲಿಯಾದ, ಕಳೆದು ಹೋದ ಚಿತ್ರಣವನ್ನು ಓದಿದಾಗ ಹಳ್ಳಿಗಳ ದುರಂತಕ್ಕೆ ಮನಸ್ಸು ಮರುಗುತ್ತದೆ. ಕಾದಂಬರಿಯಲ್ಲಿ ಬರುವ ಈ ಸಾಲುಗಳನ್ನು ಓದಿದಾಗ ಮನದ ಮೂಲೆಯಲ್ಲಿ ನೋವು ಕಾಡುತ್ತದೆ.

ನಡುಕಣಿಯ ಸುಂದರವಾದ ಏರು ತಗ್ಗುಗಳು ಬೆಟ್ಟಗುಡ್ಡಗಳು ಹಸಿರು ಗದ್ದೆಗಳು ತೊರೆಗಳು, ಕಣಿವೆಗಳು, ಕೊಳೆಗಳು, ಎಲ್ಲ ಕಡೆಗಳಿಂದಲೂ ತಲೆಯೆತ್ತಿ ಆಕಾಶ ನೋಡಲು ತವಕಿಸುತ್ತಿದ್ದ ತೆಂಗು, ಕಂಗು, ಮಾವು ಹಲಸು ಇತ್ಯಾದಿ ಮರಗಳು ಎಲ್ಲವೂ ಮಾಯವಾಗಿ ಅದು ಒಂದು ಬೃಹದಾಕಾರದ ಧೂಳಿನ ಮೈದಾನದಂತೆ ಮರುಭೂಮಿಯಂತೆ ಕಣ್ಣಿಗೆ ಕಾಣುವಷ್ಟು ದೂರವೂ ಹಬ್ಬಿತ್ತು.

‘ನೀನು ಹಿಂದಿನ ಸುಂದರವಾದ ನಡುಕಣಿಯನ್ನು ಇಲ್ಲಿಂದ ನೋಡಬೇಕಿತ್ತು. ಈ ಮರುಭೂಮಿಯನ್ನಲ್ಲ’ ಎಂದು ರಾಮಾಚಾರ್ಯರು ಸುಬ್ಬಮಣ್ಯನಿಗೆ ನಡುಕಣಿಯ ಭಾಗಗಳನ್ನು ತೋರಿಸುತ್ತಾ ಯಾವ ಯಾವುದೇ ನೆನಪಿನ ಸಂಚಿಕೆಗಳನ್ನು ಬಚ್ಚಿ ಮೆಲುಕು ಹಾಕತೊಡಗಿದರು. (ಪುಟ 236)

‘ಕಾಲ ಪುರುಷ ತನ್ನ ಪಾಲಿನ ಕರ್ತವ್ಯ ಮುಗಿಸಿದ್ದ ನಡುಕಣಿ ಅಲ್ಲಿ ಆಗ ಕಂಡವರಿಗೆ ಈಗ ಕೇವಲ ನೆನಪಾಗಿ ಉಳಿದಿದೆ.

ತುಳುನಾಡಿನ ಸ್ಥಿತ್ಯಂತರದ ಬಗ್ಗೆ ಇಂತಹ ಕಾದಂಬರಿ ರಚಿಸಿರುವ ಬಿ. ಜನಾರ್ದನ ಭಟ್ ಹಾಗೂ ಪ್ರಕಟಿಸಿರುವ ಹೇಮಾವತಿ ಪ್ರಕಾಶನ, ನೀರ್ ಮಾರ್ಗ, ಮಂಗಳೂರು ಪ್ರಶಂಸೆಗೆ ಪಾತ್ರರಾಗುತ್ತಾರೆ.

**ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್**

# ಬದುಕು ಸಾವುಗಳ ನಡುವೆ

ಮಧ್ಯಾಹ್ನದ ಉರಿ ಬಿಸಿಲು. ವಂಪ್ಸೆ ಸಂತೆ ಪೂರೈಸಿಕೊಂಡು ಈಗಷ್ಟೆ ಮನೆಗೆ ಬಂದ ಅನಂತ ಬೆವರುತ್ತಿದ್ದ ಮೈ ಮೇಲೆ ಒಂದಿಷ್ಟು ತಣ್ಣೀರು ಹಾಕಿಕೊಂಡು ಬರುವ ಅಂತ ಪಾಣಿ ಪಂಚೆಯನ್ನು ಹೆಗಲಿಗೇರಿಸಿಕೊಂಡು ಕೆರೆಯತ್ತ ನಡೆದ.

ಮೂರು ನಾಲ್ಕು ದಿನಗಳಿಂದ ತೋಟಕ್ಕೆ ನೀರು ಮೊಗೆಯದಿದ್ದ ಕಾರಣ ಕೆರೆಯಲ್ಲಿ ನೀರು ತುಂಬಿತ್ತು. ಇಷ್ಟು ಹೊತ್ತು ಮೌನವಾಗಿ ಕುಳಿತಿದ್ದ ಒಂದಿಷ್ಟು ಮಕ್ಕಳು ಅನಂತ ಕೆರೆದಂಡೆಗೆ ಬರುತ್ತಲೇ ಒಂದೇ ಸಮನೆ ಗೋಳೋ ಎಂದು ಅಳಲು ಪ್ರಾರಂಭಿಸಿದವು. ಅನಂತನಿಗೆ ಒಂದೂ ಅರ್ಥವಾಗಲಿಲ್ಲ. ತನ್ನಲ್ಲಿಯೇ ಯೋಚಿಸತೊಡಗಿದ.

"ತುಂಬಿದ ಕೆರೆಯಲ್ಲಿ ಮಕ್ಕಳು ಈಜುವುದಾಗಲೀ ನೀರಲ್ಲಿ ಆಡುವುದಾಗಲೀ ಜೀವಕ್ಕೆ ಅಪಾಯ ಅಂತ ನಾನು ಮಕ್ಕಳನ್ನು ಎಂದೂ ಆ ಕಡೆ ಹೋಗಲು ಬಿಟ್ಟವನಲ್ಲ. ಮಕ್ಕಳಿಗೇನೋ ಈಜು ಕಲಿಯಬೇಕೆಂಬ ಅದಮ್ಯ ಆಸೆ. ಇವತ್ತು ಬಹುಶ ನಾನು ಸಂತೆಗೆ ಹೋಗಿರುವುದನ್ನು ಅರಿತ ಇವರು ನನ್ನ ಕಣ್ಣು ತಪ್ಪಿಸಿ ಕೆರೆಗೆ ಬಂದಿರಬೇಕು. ತಿಳಿಯಾಗಿ ಇರಬೇಕಾಗಿದ್ದ ನೀರು ಕೆಸರು ಕೆಸರಾಗಿ ಇರುವುದನ್ನು ನೋಡಿದರೆ ಮನಸಾ ಇಚ್ಛೆ ನೀರಲ್ಲಿ ಕುಣಿದಿರಬೇಕು. ಬಹುಶ ಇದು ಇವತ್ತು ನಿನ್ನೆಯ ಮಾತಲ್ಲ. ನಾನು ಮನೆಯ ಕಡೆ ಇಲ್ಲ ಅಂತಾದರೆ ಕೆರೆಯೇ ಈ ಮಕ್ಕಳ ಸಾಮ್ರಾಜ್ಯ ಅಂತ ಕಾಣುತ್ತೆ. ನನಗೆ ಗೊತ್ತಾದಲ್ಲಿ ಮಕ್ಕಳನ್ನು ಹಿಡಿದು ಹಿಗ್ಗಾ ಮುಗ್ಗ ಬಡಿಯುತ್ತಾನಂತ ಯಾರೂ ನನ್ನ ಹತ್ತಿರ ಈ ವಿಷಯ ಪ್ರಸ್ತಾಪಿಸಿಲ್ಲ ಎಂದು ತೋರುತ್ತದೆ. ಈಗ ನನ್ನ ಕೈಯಲ್ಲಿ ಸಿಕ್ಕಿ ಬಿದ್ದಿರುವುದರಿಂದ ಪೆಟ್ಟು ತಪ್ಪಿಸಲು ನಾಟಕವಾಡುತ್ತಿರಬೇಕು. ಹುಣಸೆ ಅಡರಿನಿಂದ ಒಬ್ಬೊಬ್ಬರ ಬೆನ್ನು ಚರ್ಮ ಸುಲಿಯುತ್ತೇನೆ" ಅಂದುಕೊಳ್ಳುತ್ತಾ ಅನಂತ ಅತ್ತ ಇತ್ತ ಕಣ್ಣು ಹಾಯಿಸಿದ. ಕೆರೆಯ ಆಸುಪಾಸಿನಲ್ಲಿ ಬಿದ್ದಿರುವ ಕೆಲವು ವಸ್ತುಗಳು ಆತನ ಗಮನ ಸೆಳೆದವು.ಅಷ್ಟು ದೂರದಲ್ಲಿ ಗೇರು ಬೀಜ ತೆಗೆಯಲು ಉಪಯೋಗಿಸುವ ಬಿದಿರಿನ ಒಂದು ಉದ್ದನೆಯ ಕೊಕ್ಕೆ ಬಿದ್ದಿರುವುದು ಗೋಚರಿಸಿತು. ಸಾಲದೆಂಬಂತೆ ಒಂದಕ್ಕೊಂದು ಕಟ್ಟಿ ಹಗ್ಗದಂತೆ ಹೆಣೆದ ಒಂದಿಷ್ಟು ಸೀರೆಗಳು ಕೆರೆದಂಡೆಯ ಮೇಲೆ ಒದ್ದೆಯಾಗಿ ಬಿದ್ದಿರುವುದು ಕಂಡು ಬಂತು. ಕೆರೆಗೆ ಬಟ್ಟೆ ಒಗೆಯಲು ಬರುವ ಹೆಂಗಸರು ಒದ್ದೆ ಬಟ್ಟೆಗಳನ್ನು ಹಿಂಡಿ ಕೆರೆ ಬದಿಯ ಗದ್ದೆಗಳಲ್ಲಿ ಒಣಗಲು ಹಾಕುವುದು ಮೊದಲಿನಿಂದಲೂ ನಡೆದು ಬಂದ ಪದ್ಧತಿ. ಈ ಹುಡುಗರು ಅವುಗಳನ್ನೇ ಹಗ್ಗದಂತೆ ಹೆಣೆದು ಈ ರೀತಿಯಾಗಿ ಯಾವುದೋ ಕೆಲಸಕ್ಕೆ ಉಪಯೋಗಿಸಿಕೊಂಡಿರಬೇಕು"

ಹೀಗೆ ತನ್ನಲ್ಲೇ ತರ್ಕಿಸಿದ ಅನಂತ ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬಾಯಿ ಬಿಡಿಸುವ ಕಾರಣಕ್ಕಾಗಿ ನಿಧಾನವಾಗಿ ಮಾತಿಗಿಳಿದ.

"ನಿಜ ಹೇಳಿ ಮಕ್ಕಳೇ- ಏನಾಯಿತು, ಯಾಕೆ ಈ ರೀತಿ ಅಳ್ತೀರಿ ಅಂತ. ನಾನು ನಿಮಗೇನೂ ಬಯ್ಯುವುದಿಲ್ಲ. ಹೊಡೆಯುವುದಿಲ್ಲ ಒಟ್ಟಾರೆ ನನಗೆ ವಿಷಯ ಏನು ಅಂತ ಗೊತ್ತಾಗಬೇಕು. ನೀವು ಯಾರೂ ಹೇಳುವುದಿಲ್ಲ ಅಂದರೆ ನಿಮ್ಮ ಬಾಯಿ ಹೇಗೆ ಬಿಡಿಸಬೇಕು ಅಂತಲೂ ನನಗೆ ಗೊತ್ತಿದೆ ಹೂಂ... ಹೇಳಿ" ಅನ್ನುತ್ತಾ ಒಬ್ಬೊಬ್ಬರ ಮುಖವನ್ನೇ ಸೂಕ್ಷ್ಮವಾಗಿ ಅವಲೋಕಿಸತೊಡಗಿದ.

ಅಷ್ಟು ಹೊತ್ತಿಗೆ ಪ್ರಾಯದಲ್ಲಿ ಸ್ವಲ್ಪ ಹಿರಿಯವನಾದ ಹುಡುಗನೊಬ್ಬ ಅಳುತ್ತಾ ಮಧ್ಯ ಮಧ್ಯ ಕಣ್ಣೊರಿಸಿಕೊಳುತ್ತಾ ಮೆಲ್ಲಗೆ ಬಾಯಿ ತೆರೆದ.

"ನಿಮ್ಮ..... ಮಗ... ವಿಠ್ಠಲ..... ಈಜಲು.... ಹೋದವ.... ನೀರು....ಪಾಲಾದ. ಎರಡು ಮೂರು ಸಲ... ನೀರಿನಲ್ಲಿ... ಮೇಲೆ ಕೆಳಗೆ ಮುಳುಗಿ ಎದ್ದವ.... ಅನಂತರ ಮೇಲೆ ಬರಲೇ ಇಲ್ಲ. ನೀರಿನಲ್ಲಿ ಮುಳುಗುತ್ತಿದ್ದವನಿಗೆ... ಬದುಕಿ ಉಳಿಸಲು ನಾವು.... ಶಕ್ತಿ ಮೀರಿ ಪ್ರಯತ್ನಿಸಿದೆವು. ಇಲ್ಲಿ ಒಣಗಿಸಲು ಹಾಕಿದ.... ಹೆಂಗಸರ ಸೀರೆಗಳೆಲ್ಲವನ್ನೂ.... ಉದ್ದಕ್ಕೂ ಕಟ್ಟಿ... ಹಗ್ಗ ಮಾಡಿ... ನೀರಿಗೆಸೆದು ನೋಡಿದೆವು. ಆ ಗೇರು ಮರದ ಹತ್ತಿರ.... ಕಣಿವೆಯಲ್ಲಿ ಬಿದ್ದುಕೊಂಡಿದ್ದ ಕೊಕ್ಕೆಯನ್ನು ತಂದು... ಕೆರೆಯನ್ನೆಲ್ಲ ಜಾಲಾಡಿದೆವು. ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ನಿಮ್ಮ ಮಗ ವಿಠ್ಠಲ ಇಹಲೋಕ ತ್ಯಜಿಸಿದ. ನಮ್ಮಲ್ಲಿ.... ಯಾರಿಗೂ.... ಈಜು ಬರುತ್ತಿರಲಿಲ್ಲ. ಆದ್ದರಿಂದ...."

ಹುಡುಗ ಇನ್ನೂ ಏನೋ ಹೇಳುವವನಿದ್ದ. ಅಷ್ಟರಲ್ಲಿ "ವಿಠ್ಠಲ...." ಅಂತ ಚೀರುತ್ತಾ ಅನಂತ ಕೆರೆಯ ಅಂಚಿನಿಂದಲೇ ನೀರಿಗೆ ಧುಮುಕಿದ. ಕೆರೆಯ ಉದ್ದಗಲಕ್ಕೂ ಈಜಾಡುತ್ತಾ ಹೋಗಿ ಅಲ್ಲಲ್ಲಿ ನೀರಲ್ಲಿ ಮುಳುಗಿ ಮಗನಿಗಾಗಿ ಶೋಧ ನಡೆಸಿದ. ಏನೂ ಫಲಕಾರಿಯಾಗಲಿಲ್ಲ. ಅರ್ಧ ತಾಸು ಕೆರೆಯನ್ನೆಲ್ಲ ತಡಕಾಡಿದ ಅನಂತ ಎದುರುಸಿರು ಬಿಡುತ್ತಾ ನಿಧಾನವಾಗಿ ಮೇಲೆ ಬಂದು ದುಃಖ ಒತ್ತರಿಸಿ ಬಂದು ಅಲ್ಲೇ ಕುಸಿದ ! ಇಷ್ಟು ಹೊತ್ತಿಗೆಲ್ಲ ವಿಷಯ ಸುತ್ತಲೂ ಹರಡಿ ಜನರು ಜಾತ್ರೆಯಂತೆ ಕೆರೆ ದಂಡೆಯ ಮೇಲೆ ಜಮಾಯಿಸತೊಡಗಿದರು. ಉದ್ವೇಗ, ಆತಂಕ, ಅಳು, ದುಃಖ ಅಂತ ಕೆರೆದಂಡೆ ನರಕ ಸದೃಶವಾಗತೊಡಗಿ ಅಲ್ಲಲ್ಲಿ ಗುಜು ಗುಜು ಪಿಸು ಮಾತುಗಳು ಪ್ರಾರಂಭವಾದವು.

"ಎಷ್ಟಾದರೂ ಮಕ್ಕಳು ಮಕ್ಕಳೆ ಅವರು ನೀರಿನಲ್ಲಿ ಆಡದೆ ಇಂದೋ ನಾಳೆಯೋ ಎಂದು ದಿನ ಲೆಕ್ಕ ಮಾಡುವ ನಮ್ಮಂತಹ ಮುದಿ ಪ್ರಾಯದವರು ಆಡಲು ಸಾಧ್ಯವೇ?"

"ಹೌದು, ನಿಮ್ಮ ಮಾತು ಅಕ್ಷರಶಃ ನಿಜ ಕಾಣ್ರೀ. ಪ್ರಪಂಚ ಈಗ ಎಷ್ಟೋ ಮುಂದುವರಿದಿದೆ. ಅಂತದ್ದರಲ್ಲಿ ಜುಜುಬಿ ಈಜಾಟ ಕೂಡಾ ಆಡಬಾರದು ಅಂದ್ರೆ ಬೆಳೆಯುವ ಮಕ್ಕಳಿಗೆ ಹೇಗೆ ಆಗಾಕಿಲ್ರೀ"

"ಮರ ಹತ್ತುವುದು, ಈಜುವುದು, ಸೈಕಲ್ ಸವಾರಿಯಂತಹ ಕ್ಷುಲ್ಲಕ ವಿಷಯಗಳನ್ನು ಮಕ್ಕಳಿಂದ ದೂರವಿರಿಸಿದರೆ ಅವರು ಮುಂದೆ ಬರುವುದಾದರೂ ಹೇಗೆ ? ಈ ಪೈಪೋಟಿ ಪ್ರಪಂಚದಲ್ಲಿ ದಿನವೂ ಹೊಸ ಹೊಸ ಸಾಧನೆಗಳು ಹೊಸ ಹೊಸ ಅನ್ವೇಷಣೆಗಳು ಆವಿಷ್ಕಾರಗಳು ನಡೆಯುತ್ತಾ ಇರುತ್ತವೆ. ಅಂತದ್ದರಲ್ಲಿ...."

"ಸರಿಯಂದ್ರಿ, ಬದುಕಿನಲ್ಲಿ ಗಂಡಾಂತರ ಎಲ್ಲಿಲ್ಲ ಹೇಳಿ. ಸಾವು ಬರುವುದಿದ್ದರೆ ಮನೆಯಲ್ಲಿ ಸುಮ್ಮನೆ ಕುಳಿತಿದ್ದಾಗಲೂ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಈಗಿನ ಚಾಲೆಂಜಿಂಗ್ ಪ್ರಪಂಚದಲ್ಲಿ ಯಾವನು ಕ್ರಿಯಾಶೀಲನಾಗಿರುತ್ತಾನೋ ಯಾರಲ್ಲಿ ಸದಾ ಉತ್ಸಾಹ ತುಂಬಿರುತ್ತದೋ ಅವನೇ ಬದುಕಲು ನಿಜವಾದ ಅರ್ಹತೆ ಉಳ್ಳವನು"

**✍ ಜಿ.ವಿ. ಕಂಚುಗಾರ**

"ಅದೆಲ್ಲ ಸರಿ. ಆ ಹುಡುಗ ನೀರಿನಲ್ಲಿ ಮುಳುಗಿ ಸತ್ತು ಎರಡು ತಾಸು ಆಯಿತು. ಇಷ್ಟರೊಳಗೆ ಹೆಣ ನೀರಲ್ಲಿ ತೇಲಬೇಕಾಗಿತ್ತಲ್ಲ?" "ಎಲ್ಲೋ ತಳದಲ್ಲಿ ಸಿಕ್ಕಿಹಾಕಿಕೊಂಡಿರಬೇಕು. ಸಾಯುವ ಸ್ಥಿತಿಯಲ್ಲಿ ನೀರಡಿ ಹೋದವ ಕಲ್ಲನ್ನೋ ಮತ್ತೇನನ್ನೋ ಗಟ್ಟಿಯಾಗಿ ಹಿಡಿದುಕೊಂಡಿರುವಾಗಲೇ ಶ್ವಾಸ ಹೋಗಿರಬೇಕು"

"ಪಾಪ, ಎಳೆ ಮಗು.... ವಿನಾ ಕಾರಣ ಜೀವ ಕಳೆದುಕೊಂಡಿತು. ಆಡುವ ಪ್ರಾಯದಲ್ಲಿ ಹೀಗಾಗಬಾರದಿತ್ತು. ಮದುವೆ, ಮುಂಜಿ ಮಕ್ಕಳು ಅಂತ ಒಂದು ನಾಲ್ಕು ಕಾಲ ಬದುಕಿದ್ದರೆ ಅಷ್ಟು ದುಃಖ ಆಗುತ್ತಿರಲಿಲ್ಲ..."

ತಲೆಗೊಂದರಂತೆ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ನೀಡುವುದರಲ್ಲಿ ಮಗ್ನರಾಗಿದ್ದಂತೆಯೇ ಕೆರೆ ದಂಡೆಯ ಮೇಲೆ ಒಮ್ಮೆಲೇ ಸ್ಮಶಾನ ಮೌನ ಆವರಿಸಿತು.

ಎಲ್ಲರ ದೃಷ್ಟಿಯೂ ಫರ್ಲಾಂಗು ದೂರದಲ್ಲಿ ಬರುತ್ತಿದ್ದ ವ್ಯಕ್ತಿಯ ಕಡೆಗೆ ಹರಿಯಿತು. ಎಲ್ಲರೂ ಕಣ್ಣೀರಾಡುತ್ತಿದ್ದ ಮುಖವನ್ನು ಎರಡೆರಡು ಬಾರಿ ಒರೆಸಿಕೊಂಡು ಮತ್ತೊಮ್ಮೆ ಅತ್ತ ದೃಷ್ಟಿ ಹಾಯಿಸಿದರು. ವಿಠ್ಠಲ ದಾಪುಗಾಲು ಹಾಕುತ್ತಾ ಕೆರೆಯತ್ತ ಬರುತ್ತಿದ್ದ!

ಅವನನ್ನು ಕಾಣುತ್ತಲೇ ಇಷ್ಟು ಹೊತ್ತು ಅಳುತ್ತಾ ಕೂತಿದ್ದ, ಮಕ್ಕಳು, ಒಬ್ಬೊಬ್ಬರಾಗಿ ಎದ್ದವರು "ಭೂತ ಭೂತ" ಅಂತ ಚೀರಾಡುತ್ತಾ ದಿಕ್ಕಾಪಾಲಾಗಿ ಓಡತೊಡಗಿದರು. ನೆರೆದ ಜನ ಸಮುದಾಯ ಏನೂ ಅರ್ಥವಾಗದೆ ಎಲ್ಲವೂ ಗೋಜಲು ಗೋಜಲಾಗಿ ವಿಚಿತ್ರ ರೀತಿಯಲ್ಲಿ ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು.

# ಲೇಡಿ ಬರ್ಡ್ ಹತ್ತಿ ಹೊರಟೇ ಹೋದಳು..

ಬಸ್ ಇಳಿದು ಸುತ್ತಲೂ ನೋಡಿದಾಗ ಎಲ್ಲರೂ ಅಪರಿಚಿತರು.. ಹೊಸ ಲೋಕಕ್ಕೆ ಬಂದ ಅನುಭವ ಅಲ್ಲಿಯೇ ಇರುವ ಒಬ್ಬರನ್ನು 'ಈ ವಿಳಾಸ ಎಲ್ಲಿ ಬರುತ್ತದೆ..?' ಎಂದು ಕೇಳಿದೆ.ಕೈ ಯಿಂದ ತೋರಿಸಿ ನಡದೇ ಹೋಗಬಹುದು ಎಂದು ಹೇಳಿದ. ಸಾಯಂಕಾಲದ ಹೊತ್ತು ಸಭಾ ಮಂದಿರದ ಹತ್ತಿರ ಬಂದಾಗ 'ಸುಸ್ವಾಗತ' ಫ್ಲೆಕ್ಸ್ ನನಗಾಗಿಯೇ ಹೇಳಿದಾಗೆ ಇತ್ತು. ಸಂತೋಷದಿಂದ ನಾ ತಂದ ಪುಸ್ತಕದ ಜೊತೆಗೆ ಸಭಾಮಂದಿರದ ಒಳ ಹೋಗಿ ಕೊನೆಯಸಾಲಿನ ಪ್ಲಾಸ್ಟಿಕ್ ಕುರ್ಚಿಯ ಮೇಲೆ ಕುಳಿತು ಬರುವ ಅಪರಿಚಿತ ಸಭಿಕರನ್ನು ನೋಡುತ್ತಿದ್ದೆ. ಗಂಟೆ ಏಳಾಗುತ್ತಿದ್ದಂತೆ ಕುರ್ಚಿಗಳು ತುಂಬಿದವು. ಎಲ್ಲರ ಕಣ್ಣು ಆ ದಿನದ ಮುಖ್ಯ ಅಥಿತಿಯ ಬರುವಿಕೆಯನ್ನೇ ಕಾಯುತ್ತಿತ್ತು ಕಾರಣ ಅಂದಿನ ಮುಖ್ಯ ಅಥಿತಿಯ ಚಿತ್ರನಟ ಅಂಬರೀಶ್. ಸಹಜ ಎಲ್ಲರಂತೆ ನಾನೂ ಕುರ್ಚಿಯ ಮುಂತುದಿಯಲ್ಲಿಯೇ ಕುಳಿತ್ತಿದ್ದೆ.

ಅದು ಸಾಮಾನ್ಯ ಕಾರ್ಯಕ್ರಮವಾಗಿರಲಿಲ್ಲ 'ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನ'. ಒಂಬತ್ತರಿಂದ ತೊಂಬತ್ತರವರೆಗಿನ ಎಲ್ಲಾ ವಯೋಮಿತಿಯ ಸಾಹಿತಿಗಳ ಸಂಗಮ ಆಶಯವಿತ್ತು. ರಾಜ್ಯಮಟ್ಟದಲ್ಲಿ ಆಯ್ಕೆಯಾದ ಚುಟುಕು ಸಾಹಿತಿಗಳಿಂದ ಚುಟುಕುವಾಚನ ಮತ್ತು 'ಚುಟುಕು ಶ್ರೀ', 'ಚುಟುಕು ಪದ್ಮ' ಪ್ರಸಸ್ತಿ ವಿತರಣಾ ಸಮಾರಂಭ. ಒಬ್ಬಬ್ಬರೇ ವೇದಿಕೆಯ ಮುಂಭಾಗದಲ್ಲಿ ವಿಶೇಷವಾಗಿ ಹಾಕಿದ್ದ ಕುರ್ಚಿಯಲ್ಲಿ ಆಸೀನರಾದರು. 'ಇಲ್ಲಿ ನೆರೆದಿರುವ ಸಮಸ್ತ ಸಾಹಿತ್ಯಾಸಕ್ತರಿಗೆ ಸ್ವಾಗತ ಸುಸ್ವಾಗತ' ಎಂದು ಹೇಳಿದ ದ್ವನಿ ನನ್ನಲ್ಲಿ ವಿದ್ಯುತ್ ಸಂಚಲನವನ್ನೇ ಮಾಡಿಸಿತು.

ಯಾರದು ಅಷ್ಟೊಂದು ಸ್ಪಷ್ಟ ರೀತಿಯಲ್ಲಿ ಸ್ವಾಗತಿದ್ದು ಕಣ್ಣು ಅತ್ತಕಡೆ ನೋಡಿತು..! ಗುಂಗುರು ಕೂದಲಿನ, ಗುಲಾಬಿರಂಗಿನ ಮೈಬಣ್ಣ, ನವಿಲು ಬಣ್ಣದ ಸೀರೆ... ಕಣ್ಣು ಮಿಟುಕಲೇ ಇಲ್ಲ ಎಷ್ಟೋ ಹೊತ್ತಿನವರೆಗೂ. ಮನ ಸೋತ ಹಾಗೆ ಭಾಸವಾಯಿತು.

ವೇದಿಕೆಯ ಮೇಲೆ ಎಲ್ಲಾ ಗಣ್ಯರು ಆಸೀನರಾದರು ಆದರೆ ಒಂದು ನಿರಾಸೆ ಎಲ್ಲರನ್ನು ಕಾದಿತ್ತು ಕಾರಣ ಯಾವುದೋ ಕಾರಣಕ್ಕೆ ಅಂಬರೀಶ್ ಕಾರ್ಯಕ್ರಮಕ್ಕೆ ಬರುವುದಿಲ್ಲವೆಂಬ ಪ್ರಕಟಣೆ. ಆದರೆ ನನಗೆ ಕೊಂಚವೂ ಬೇಸರವಾಗಲಿಲ್ಲ. ನಿರೂಪಕಿಯ ಮಾತಿನಲ್ಲಿ ಮತ್ತು ಮೈಮಾಟದಲ್ಲಿ ನಾ ನನ್ನನ್ನೆ ಮರೆತು ಹೋಗಿದ್ದೆ. ಮೂರು ತಾಸಿನ ಕಾರ್ಯಕ್ರಮ ಮೂವತ್ತೇ ನಿಮಿಷದಲ್ಲಿ ಮುಗಿದ ಹಾಗೆ ಆಯಿತು. ಚುಟುಕು ವಾಚನವನ್ನು ನಾಳೆಯ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ ಮತ್ತು ಇಂದು ಪರಸ್ಥಳದಿಂದ ಬಂದ ಎಲ್ಲರಿಗೂ ಶಾಲೆಯಲ್ಲಿ ಉಳಿಯಲು ವ್ಯವಸ್ಥೆ ಮಾಡಲಾಗಿದೆ ಅದಕ್ಕೂ ಮುಂಚಿತವಾಗಿ ರಾತ್ರಿ ಭೋಜನದ ವ್ಯವಸ್ಥೆಯನ್ನೂ ಮಾಡಲಾಗಿದೆ ಇಂದು ಹೇಳಿದ ಮಾತು ಕಿವಿಯಲ್ಲಿ ಹಾಗೆಯೇ ಉಳಿದವು. ತಕ್ಷಣ ಅವಳಿದ್ದ ಕಡೆ ಹೋಗಿ 'ನಿಮ್ಮ ನಿರೂಪಣೆ ತುಂಬಾ ಚೆನ್ನಾಗಿ ಬಂತು..' ಎಂದು ಹೇಳಿದೆ. 'ಥ್ಯಾಂಕ್ಸ್' ಎಂದೇಳಿ ಹೊರಟೇ ಹೋದಳು.

ಗಂಟೆ ಒಂಬತ್ತಾದ್ದರಿಂದ ಎಲ್ಲರೂ ಊಟಕ್ಕೆ ಸಾಲಿನಲ್ಲಿ ಕುಳಿತ್ತಿದ್ದರು.. ನಾನೂ ಸಹ ಹಿರಿಯ ನಾಗರಿಕರ ಜೊತೆಯಲ್ಲಿದ್ದ ಕುರ್ಚಿಯಲ್ಲಿ ಕುಳಿತು ಅವರ ಪಕ್ಕದಲ್ಲಿಯೇ ಇದ್ದ ಖಾಲಿ ಕುರ್ಚಿಯನ್ನು ನೋಡುತ್ತಿದ್ದೆ, ಎಣಿಸಿದಾಗೆಯೇ ನಿರೂಪಕಿಯೂ ಒಂದು ನಗೆಯೊಂದಿಗೆ ಅವರ ಪಕ್ಕವೇ ಕುಳಿತಳು. ನನಗೆ ಅಲ್ಲಿಯವರೆಗೆ ಓಡಾಡುತ್ತಿದ್ದ ಹೊಟ್ಟೆಯಲ್ಲಿನ ಇಲಿಗಳು ಶಾಂತವಾದವು. ಹೊಟ್ಟೆ ತುಂಬಿದ ಅನುಭವವಾಯಿತು. ಅವಳನ್ನೇ ನೋಡುತ್ತಾ ಕುಳಿತೆ..

'ಕೈ ತಗಿರಿ' ಎಂದು ಬಡಿಸುವವ ಹೇಳಿದಾಗಲೇ ನಾನು ವಾಸ್ತವ ಜಗತ್ತಿಗೆ ಬಂದದ್ದು. ನಾನು ಮತ್ತೊಮ್ಮೆ ನಿರೂಪಣೆ ಬಗ್ಗೆ ಮಾತು ತೆಗೆದಾಗ ಒಂದರಿಂದೆ ಒಂದಂತೆ ನಮ್ಮಿಬ್ಬರ ಮಧ್ಯೆ ಮಾತುಗಳು ಶುರು ಆದವು.

'ನೀವು ಎಲ್ಲಿಯವರು' ಎಂಬವಳ ಪ್ರಶ್ನೆಗೆ

'ಯರವಾಡ..' ಎಂದೆ

'ಧಾರವಾಡ ಸಾಹಿತ್ಯದ ತವರಿನಲ್ಲಿ ಇದೀರ..?'

'ಇಲ್ಲ. ಇಲ್ಲ.. ಯರವಾಡ..' ಎಂದೆ

'ಹೋ.. ಸಾರಿ..' ಎನ್ನುವ ಹೊತ್ತಿಗೆ,

ನಮ್ಮ ಮಾತನ್ನೇ ಕೇಳುತ್ತಿದ್ದ ಹಿರಿಯ ನಾಗರಿಕರು

'ಊಟವಾಯಿತಲ್ಲ.. ಎದ್ದೇಳೋಣ..!' ಎಂದರು.

ನಮಗೂ ಅದರ ಪರಿವೇ ಇಲ್ಲದೆ ಮುಗಿದು ಹೋಗಿತ್ತು.



✍ ನಾಗರಾಜ್.ಮುಕಾರಿ (ಚಿರಾಭಿ)
ಕೈಗಾ, ಕಾರವಾರ.

'ಆಯಿತು.. ನಾಳೆ ಬರೂತ್ತೀರಲ್ಲಾ..? ನಾಳೆಯೂ ನಿಮ್ಮದೇ ನಿರೂಪಣೆಯಾ..? ಈ ಹೂ ತೆಗೆದುಕೊಳ್ಳಿ.. (ಕೆಂಪು ಗುಲಾಬಿ ರಿಶೆಪ್ಸ್‌ನಲ್ಲಿ ಕೊಟ್ಟಿದ್ದು)

ಯಾವುದಕ್ಕೂ ಉತ್ತರ ಹೇಳದೇ ನಾಳೆ ನಿನಗಾಗಿಯೇ ಬರುವೆನೆಂದೇಳಿ ಒಂದು ನಗೆ ಸೂಸಿ ತನ್ನ ಲೇಡಿ ಬರ್ಡ್ ಹತ್ತಿ ಹೊರಟೇ ಹೋದಳು.. ಇದ್ದನ್ನೆಲ್ಲಾ ಗಮನಿಸುತ್ತಿದ್ದ ಹಿರಿಯ ನಾಗರಿಕರು.

'ಎಲ್ಲಿ ಸ್ಟೇ ಮಾಡ್ತೀರಾ..?' ಎಂದು ಕೇಳಿದರು

..ಸಾರ್ ,ನೀವು..? ಎಂದೆ

'ಹೋಟೆಲ್..'

ಸರಿ ನಾನೂ ನಿಮ್ಮ ಜೊತೆ ಬರ್ತೀನಿ... ಎಂದೇಳಿ ಲಾಡ್ಜಿಗೆ ಹೊರಟೆವು.. ರಾತ್ರಿಯಲ್ಲಾ ಅವಳದೇ ನೆನಪು.. ನಾಳೆ ಹೇಳ ಬೇಕೆಂದ ಚುಟುಕು ಸ್ವಲ್ಪ ಬದಲಾವಣೆ ಯಾದವು.. ಅವಳ ಹೆಸರ ಮೇಲೆ ಬೇರೆ ಚುಟುಕು ಮೂಡಿ ನನ್ನ ಪುಸ್ತಕದಲ್ಲಿ ಭಂದಿಯಾದವು. ಸೂರ್ಯ ಮೂಡಣದಿ ಏಳುತ್ತಿದ್ದಂತೆ.. ನನ್ನ ಮುಖದ ಮೇಲೆ ತುಂತುರು ಹನಿಗಳು..!

'ಏಳು.. ಹರಿ ಬಂದಿದಾನೆ ಸ್ಪೆಷಲ್ ಕ್ಲಾಸ್‌ಗೆ ಹೊಗಲ್ವಾ..?' ಎಂದು ನನ್ನ ತಾಯಿ ಹೇಳಿದಾಗಲೇ ಗೊತ್ತಾಯ್ತು..

ಅರೆ ಕನಸಾ.. ಛೇ.. ಕನಸಾ ಎಂದು..!


## MATRIMONIAL

### SUITABLE BRIDE WANTED

| | | |
|---|---|---|
| Name | : | Guru Murthy |
| Age | : | 35 |
| Caste | : | Smartha Brahmin |
| Native | : | Hubli |
| Qualification | : | M. TECH -Mechanical |
| Job | : | TECH. MAHINDRA - Mumbai (Tractor Divn. Mahindra - Kandivli ) |

CASTE NO BAR, Girl should be working as Teacher, Software Engineer , Bank employee etc.

Ready to move to Pune, Chennai or Bangalore

Should you need any further info, regarding our boy , please contact me.

Best regards

B. Nagesh

Kandivli

Mob: 887925 4468/ 989290 2454

# ಕ್ಷಮಾದಾನ



✍ ಶಾರಾದಾ ಎ. ಅಂಚನ್

ನಾನು ಹುಚ್ಚಿಯಾಗುತ್ತಿದ್ದೇನೆ ಎಂದೆನಿಸುತ್ತಿದೆ ನನಗೆ. ಕಳೆದ ಒಂದು ತಿಂಗಳಿನಿಂದ ನನ್ನ ಮನಸ್ಥಿತಿಯೇ ಸರಿಯಿಲ್ಲ ದಂತಾಗಿದೆ. ನನ್ನ ಎರಡು ವರ್ಷದ ಪುಟ್ಟ ಕಂದ ಅನೂಪ್ ನನ್ನು ಕಂಡಾಗಲಂತೂ ಕತ್ತು ಹಿಸುಕಿ ಸಾಯಿಸಬೇಕೆಂದೆನಿಸುತ್ತಿದೆ. ನಾನು ಅನುಸೂಯ. ವೃತ್ತಿಯಲ್ಲಿ ಡಾಕ್ಟರ್, ಸ್ತ್ರೀರೋಗ ತಜ್ಞೆ, ನನ್ನ ಪತಿ ಡಾ|| ಚಿರಾಗ್ ಮಕ್ಕಳ ತಜ್ಞ. ನನ್ನ ಜೀವನದ ಒಗಟುಗಳನ್ನು ಯಾರಲ್ಲಿ ಹೇಳಲಿ? ಹತ್ತಿಕ್ಕಲಾಗದ ಮಾನಸಿಕ ವೇದನೆಯನ್ನು ತಡೆಯಲಾರದೆ ನನ್ನದೇ ಸಹೋದ್ಯೋಗಿ ಮಾನಸಿಕ ತಜ್ಞ ಡಾ|| ವಿನೀತ್‌ನಿಗೂ ಕನ್ಸಲ್ಟ್ ಮಾಡಿದೆ. ಆದರೆ ಆತ ಕೇಳಿದ ನನ್ನ ಜೀವನದ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಹೊರಗೆದ್ದು ಬಂದಿದ್ದೆ. ನನ್ನ ಪತಿ ಡಾ|| ಚಿರಾಗ್ ಕೂಡಾ ಇತ್ತೀಚೆಗೆ ನನ್ನ ಮಾನಸಿಕ ಸ್ಥಿತಿಯಲ್ಲಾದ ಬದಲಾವಣೆಯನ್ನು ಗಮನಿಸಿದ್ದಾರೆ. "ಏನಾಗಿದೆ ಅನೂ? ಮಗುವನ್ನೇಕೆ ಒಮ್ಮಿಂದೊಮ್ಮೆಲೇ ದ್ವೇಷಿಸಲಾರಂಭಿಸಿದ್ದಿ? ಅದು ನಿನ್ನ ರಕ್ತ ಹಂಚಿಕೊಂಡು ಬಂದ ಮಗು ತಾನೇ? ಈ ಎರಡು ವರ್ಷ ಇರದ ಮಾನಸಿಕ ತುಮುಲ ಈಗ್ಯಾಕೆ ? ಯಾಕಾಗಿ ನೀನು ಈ ರೀತಿ ಮಾತು ಮಾತಿಗೂ ಚೀರುತ್ತಿ? ಹೆದರುತ್ತಿ?" ಎಂದು ಸಂತೈಸುವಾಗ ಏನೊಂದೂ ಉತ್ತರ ಕೊಡದೆ ಅವರಿಂದ ದೂರ ಹೋಗಿ ಅಳುತ್ತೇನೆ. ಚಿರಾಗ್ ಕೂಡಾ ನನ್ನ ಇತ್ತೀಚಿನ ವರ್ತನೆಯಿಂದ ತುಂಬಾ ನೊಂದುಕೊಂಡಿದ್ದಾರೆ. ಹೌದು! ಚಿರಾಗ್‌ಗೆ ನನ್ನ ಜೀವನದ ಸತ್ಯಗಳನ್ನು ತಿಳಿಸಬೇಕು. ಅವರು ನನ್ನನ್ನು ಮತ್ತೆ ಸ್ವೀಕರಿಸಲಿ ಅಥವಾ ತಿರಸ್ಕರಿಸಲಿ, ಅದುಮಿಟ್ಟ ಯಾತನೆಯನ್ನಂತೂ ಹೇಳಿಕೊಳ್ಳಲೇಬೇಕು. ನನ್ನ ಬದುಕಿನ ಈ ಸತ್ಯ ತಿಳಿದರೆ ಬಹುಶಃ ಈ ಸಮಾಜವೂ ಬಹಿಷ್ಕೃತಗೊಳಿಸಬಹುದು. ಈ ಸಮಾಜದ ಪತಿವ್ರತಾ ಸ್ತ್ರೀಯರೆಲ್ಲಾ ನನ್ನನ್ನು ಚಾಂಡಾಲಿ ಎಂದು ಕರೆಯಬಹುದು. ಆದರೆ ನನಗೀಗ ಸಮಾಜದ ಚಿಂತೆಯಿಲ್ಲವಾಗಿದೆ. ನನ್ನನ್ನು ದೇವತೆಯಾಗಿ ಕಂಡ ನನ್ನ ಪತಿಗೆ ನನ್ನ ಮುಚ್ಚಿಟ್ಟ ಬದುಕಿನ ಸತ್ಯವನ್ನು ತಿಳಿಸಿ ಅವರ ನಿರ್ಧಾರದ ಮೂಲಕ ಈ ಜೀವನದ ಉಳಿವು ಯಾ ಅಂತ್ಯವನ್ನು ನಿರ್ಧರಿಸುವುದಾಗಿದೆ.

ನಾನು ಚಿರಾಗ್‌ನನ್ನು ಮದುವೆಯಾದದ್ದು ನಾಲ್ಕು ವರ್ಷಗಳ ಹಿಂದೆ. ನಾವಿಬ್ಬರೂ ಒಂದೇ ಆಸ್ಪತ್ರೆಯಲ್ಲಿ ವೃತ್ತಿಯಲ್ಲಿದ್ದೆವು. ಪರಿಚಯ ಪ್ರೇಮಕ್ಕೆ ತಿರುಗಿ ಹೆತ್ತವರ ಅನುಮತಿಯೊಂದಿಗೆ ನಮ್ಮಿಬ್ಬರ ವಿವಾಹ ಅದ್ದೂರಿಯಾಗಿ ನೆರವೇರಿತ್ತು. ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಂತಿತ್ತು ನಮ್ಮ ಸಂಸಾರ. ಚಿರಾಗ್ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ಮದುವೆಯಾಗಿ ಒಂದು ವರ್ಷವಷ್ಟೇ ಆಗಿತ್ತು. ಹೆತ್ತವರ ಪ್ರಶ್ನೆಯಾಗಿತ್ತು "ನಮಗೆ ಮೊಮ್ಮಗುವನ್ನು ಎಂದು ಕೊಡುತ್ತೀರಿ?" ಎಂದು. ಹೌದು, ನಮ್ಮದೇನೂ ಪ್ಲ್ಯಾನಿಂಗ್ ಇರಲಿಲ್ಲ ಮಗುವಾಗದಂತೆ. ಇಬ್ಬರೂ ವೃತ್ತಿಯಲ್ಲಿ ವೈದ್ಯರೇ, ಆದ್ದರಿಂದ ಮಕ್ಕಳಾಗದವರ ಸಮಸ್ಯೆ, ನೋವಿನ ಅರಿವಿದ್ದುಕೊಂಡ ನಾವು ಆದಷ್ಟು ಬೇಗ ಮಕ್ಕಳಾಗುವುದೇ ಒಳ್ಳೆಯದೆಂದು ನಿರ್ಧರಿಸಿದ್ದೆವು. ನಾನೊಮ್ಮೆ ನನ್ನ ಗರ್ಭಾಶಯದಲ್ಲೇನಾದರೂ ತೊಂದರೆ ಇದೆಯಾ ಎಂದು ನನ್ನ ಸಹೋದ್ಯೋಗಿ ಡಾ|| ಮಾಲಾಳಿಂದ ಪರೀಕ್ಷೆ ಮಾಡಿಸಿಕೊಂಡೆ. ಎಲ್ಲಾ ಸರಿಯಾಗಿತ್ತು. ಚಿರಾಗ್‌ಗೆ ಹೇಳಿದೆ. ನಿಮ್ಮ ವೀರ್ಯದ ಸ್ಯಾಂಪಲ್ ಕೊಡಿ, ಒಮ್ಮೆ ಪರೀಕ್ಷೆ ಮಾಡಿಸುವ ಎಂದು. ಹಾಗೆಯೇ ಒಂದು ದಿನ ಚಿರಾಗ್‌ನ ವೀರ್ಯದ ಸ್ಯಾಂಪಲ್‌ನ್ನು ಲ್ಯಾಬೋರೇಟರಿಗೆ ತೆಗೆದುಕೊಂಡು ಹೋಗಿದ್ದೆ. ಅಂದು ಸಂಜೆಯೇ ಚಿರಾಗ್‌ನ ರಿಪೋರ್ಟ್ ಸಿಕ್ಕಿತ್ತು. ರಿಪೋರ್ಟ್ ನೋಡಿದ ನನ್ನ ಕಣ್ಣಂಚಿನಲ್ಲಿ ಕಂಬನಿ ಹನಿಹನಿಯಾಗಿ ಉರುಳಿತ್ತು. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಹ ಅನುಭವ ! ಕುಸಿದು ಕುಳಿತೆ. ನನ್ನ ಚಿರಾಗ್‌ನ ವೀರ್ಯದಲ್ಲಿ ಒಂದೇ ಒಂದು ವೀರ್ಯಾಣು ಇರಲಿಲ್ಲ. ಪುಟ್ಟ ಮಕ್ಕಳ ತಪಾಸಣೆ ಮಾಡುತ್ತಾ, ಅವುಗಳ ನಗು ದುಃಖದಲ್ಲಿ ದಿನಾಲೂ ಕಾಲ ಕಳೆಯುತ್ತಿದ್ದ ಮಕ್ಕಳ ತಜ್ಞ ಡಾ| ಚಿರಾಗ್‌ಗೆ ಸ್ವತಃ ತನ್ನದೇ ಆದ ಒಂದು ಮಗುವನ್ನು ಪಡೆಯುವ ಭಾಗ್ಯ ಇರಲಿಲ್ಲ!. ಮಗು ಬೇಕೆಂದು ನನ್ನ ಬಳಿ ಚಿಕಿತ್ಸೆಗೆಂದು ಬರುವ ನೂರಾರು ಸ್ತ್ರೀಯರಿಗೆ ಸಾಂತ್ವನ ನೀಡಿ ಔಷಧೋಪಚಾರ ಮಾಡಿ ನಂತರ ಅವರಿಗೆ ಮಕ್ಕಳಾದಾಗ ಆ ಸ್ತ್ರೀಯರ ಕಣ್ಣಲ್ಲಿ ನನ್ನ ಬಗ್ಗೆ ಧನ್ಯತಾ ಭಾವ ಕಂಡು ಉಬ್ಬಿ ಹೋಗುತ್ತಿದ್ದ ನನಗೆ, ನನ್ನ ಗರ್ಭದಲ್ಲಿ ಚಿರಾಗ್‌ನ ಪ್ರೀತಿಯ ಕುಡಿಯೊಂದನ್ನು ಪಡೆಯುವ ಭಾಗ್ಯ ಇರಲಿಲ್ಲ. ಆ ಸತ್ಯ ತಿಳಿದಾಗ ನಾನೊಂದು ಡಾಕ್ಟರ್ ಎಂಬುದನ್ನು ಮರೆತು ಒಬ್ಬ ಸಾಮಾನ್ಯ ಹೆಣ್ಣಿನಂತೆ ಮನಸಾರೆ ಅತ್ತೆ. ಹೆಣ್ಣು ಎಂಬ ಪದದ ಮಹತ್ವ ಆಗಲೇ ನನಗೆ ಸಂಪೂರ್ಣ ಅರಿವಾಗಿದ್ದು. ಚಿರಾಗ್‌ಗೂ ರಿಪೋರ್ಟ್ ತೋರಿಸಿದೆ. ರಿಪೋರ್ಟ್ ನೋಡಿದ ಡಾ|| ಚಿರಾಗ್ ಬರಿಯ ಚಿರಾಗ್ ಆಗಿ ಕುಸಿದರು. ತಾನು ತನ್ನ ಹೆಂಡತಿಯ ಗರ್ಭದಲ್ಲಿ ಮಗುವೊಂದನ್ನು ಫಲಿಸಲಾರೆ ಎನ್ನುವ ಸತ್ಯ ತಿಳಿದರೆ ಯಾವ ಗಂಡಸಿನ ಹೃದಯ ತಾನೇ ಚೂರಾಗದು? ಚಿರಾಗ್‌ನ ದುಃಖವನ್ನು ಕಂಡ ಮೇಲೆ ನನ್ನ ವೇದನೆಯನ್ನು ಬದಿಗೆ ಇಟ್ಟು, ಅವರನ್ನು ಸಂತೈಸುವುದು ನನ್ನ ಕರ್ತವ್ಯವಾಗಿತ್ತು. ಚಿರಾಗ್‌ನ ಕುಂದಿದ ಮುಖವನ್ನು ನೋಡಿ ನಾನಂದಿದ್ದೆ, "ಯಾಕೆ ಇಷ್ಟು ಚಿಂತೆ ? ನಿಮ್ಮ ಟೆಸ್ಟಿಕ್ಯೂಲರ್ ಬಯಾಪ್ಸಿ ಮಾಡಿಸಿದರಾಯಿತು. ಏನಾದರೂ Block ಇದ್ದರೆ ತೆಗೆದರೆ ಸರಿಯಾದೀತು, ಈಗಲೇ ಯಾಕಿಷ್ಟು ಚಿಂತೆ? ಒಬ್ಬ ಡಾಕ್ಟರ್‌ರಾಗಿ ಹೀಗೆ ಕುಗ್ಗಿ ಹೋದರೆ ಏನು ಪ್ರಯೋಜನ?'' ಅದುಮಿಟ್ಟ ನನ್ನ ದುಃಖವನ್ನು ಬದಿಗಿರಿಸಿ ಅವರನ್ನು ಸಮಾಧಾನಿಸಿದೆ.

ಮಗುವಿಗಾಗಿ ನಮ್ಮ ಪ್ರಯತ್ನಗಳನ್ನು ಮುಂದುವರೆಸಿದೆವು. ಚಿರಾಗ್‌ನ ಟೆಸ್ಟಿಕ್ಯೂಲರ್ ಬಯಾಪ್ಸಿ ಮಾಡಿದಾಗಲೂ ನಮಗೆ ನೆಮ್ಮದಿ ನೀಡುವಂತಹ ಉತ್ತರ ದೊರೆಯಲಿಲ್ಲ. ಈಗ ಚಿರಾಗ್ ನನ್ನ ಬಗ್ಗೆ ಯೋಚಿಸಲಾರಂಭಿಸಿದರು. IUI ಬಗ್ಗೆ ತಿಳಿಸಿದರು. IUI ಅಂದರೆ ತನ್ನ ವೀರ್ಯ ಅಥವಾ ವೀರ್ಯ ದಾನಿಗಳ ವೀರ್ಯವನ್ನು ಸ್ವೀಕರಿಸಿ ಗರ್ಭ ಧರಿಸುವುದು. ತನ್ನದಲ್ಲದಿದ್ದರೂ ನನ್ನ ರಕ್ತದ ಮುದ್ದೆಯಾದರೂ ನನ್ನ ಮಡಿಲಲ್ಲಿ ಬೆಳೆಯಲಿ ಎಂಬುದು ಅವರ ಆಶಯವಾಗಿತ್ತು. ನನಗೂ ಅದೇ ಸರಿಯೆಂದು ಕಂಡಿತು. ಆದರೆ ಅನಾಮಧೇಯ ವ್ಯಕ್ತಿಯ ವೀರ್ಯವನ್ನು ಪಡೆದು ಮಗುವನ್ನು ಪಡೆಯಲು ಮನಸ್ಸಿನಲ್ಲಿ ಅಸಮಾಧಾನವೂ ಮೂಡಿತ್ತು. ಡಾಕ್ಟರ್ ಆಗಿ ನಾನು ಆ ರೀತಿ ಯೋಚಿಸಬಾರದಿತ್ತು. ಆದರೆ ಒಬ್ಬ ಹೆಣ್ಣಾಗಿ ಆ ರೀತಿ ಯೋಚಿಸುವಂತಾದೆ. ಇಂತಹಾ ಸಂದರ್ಭದಲ್ಲೇ ಡಾ|| ಪ್ರೀತಂನ ಪ್ರವೇಶ ನನ್ನ ಬದುಕಿನಲ್ಲಾದದ್ದು.

ಡಾ|| ಪ್ರೀತಂ ನನ್ನ ಸಹೋದ್ಯೋಗಿ. ಈತನೂ ಸ್ತ್ರೀರೋಗ ತಜ್ಞ. ನನ್ನೆಲ್ಲಾ ಸಮಸ್ಯೆಗಳನ್ನು ತಿಳಿದುಕೊಂಡಿದ್ದವ ಈತ. ವಿವಾಹಿತ, ಹೆಣ್ಣು ಮಗುವೊಂದರ ತಂದೆ. ನನ್ನ ಸಮಸ್ಯೆಗಳನ್ನು ಈತನೊಂದಿಗೆ ಸಂವಾದಿಸಿದಾಗ ಈತನೆಂದಿದ್ದ, "ನಾನು ನನ್ನ ವೀರ್ಯವನ್ನು ನಿನಗೆ ದಾನ ಮಾಡುತ್ತೇನೆ. ಅನಾಮಿಕ ವ್ಯಕ್ತಿಯ ವೀರ್ಯದಿಂದ ಮಗುವಾಗಿ ಮುಂದೆ ಮಗುವಿಗೆ ಏನಾದರೂ ತೊಂದರೆ ಬಂದರೂ ಬರಬಹುದು. ಆತನ ದೈಹಿಕ ಆರೋಗ್ಯದ ಅರಿವಿರುವುದಿಲ್ಲ ನಮಗೆ. ನನಗೆ ಮಗುವಾಗಿದೆ, ಆರೋಗ್ಯವಾಗಿದೆ. ನಾವಿಬ್ಬರೂ ಸಹೋದ್ಯೋಗಿಗಳು. ಮುಂದೆ ಏನೂ ತೊಂದರೆ ಬರಲಾರದು." ಎಂದಾಗ ನನಗೇಕೋ ಪ್ರೀತಂನ ಮಾತು ಸರಿ ಎಂದೆನಿಸಿತ್ತು. "ಯಾರೊಂದಿಗೆ ನನ್ನ ದೈಹಿಕ ಸಂಬಂಧವಿದೆಯೋ ಆತನೇ ನನ್ನ ಮಗುವಿನ ತಂದೆಯಾಗಬಲ್ಲ. ಪ್ರೀತಂ ನನಗೆ ವೀರ್ಯದಾನ ಮಾಡಿದರೂ ನನ್ನ ಮಗುವಿಗೆ ತಂದೆ ಚಿರಾಗ್ ತಾನೇ? ಇದರಲ್ಲೇನು ತಪ್ಪು?'' ಪ್ರೀತಂನ ಹೇಳಿಕೆಯ ಬಗ್ಗೆ ದೀರ್ಘವಾಗಿ ಯೋಚಿಸಿ ಸರಿಯಾದ ನಿರ್ಧಾರ ತೆಗೆದುಕೊಂಡು ಆಗಬಹುದು ಎಂದೆ ಪ್ರೀತಂಗೆ. ಆದರೆ ಯಾಕೋ ಈ ವಿಷಯ ಚಿರಾಗ್‌ಗೆ ತಿಳಿಸುವುದು

ಬೇಡವೆಂದೆನಿಸಿತು ನನಗೆ. ಪ್ರೀತಂಗೂ ತಿಳಿಸಿದೆ ನನ್ನ ಮನದ ವಿಚಾರ. ನಿನ್ನಿಷ್ಟ ಎಂದ ಪ್ರೀತಂ. ಹೀಗೆ 3-4 ಸಲ ಪ್ರೀತಂನ ವೀರ್ಯದ ಮುಖಾಂತರ ಮಾಡಿದ IUI ನಿಂದ ಕೊನೆಗೂ ನಾನು ಗರ್ಭಿಣಿಯಾದೆ. ಚಿರಾಗ್ ಮಾತ್ರ ತಿಳಿದಿದ್ದುದು ನಾನು ವೀರ್ಯ ಬ್ಯಾಂಕ್‌ನಿಂದಲೇ ವೀರ್ಯ ಸ್ವೀಕರಿಸಿ ಗರ್ಭಿಣಿಯಾದೆ ಎಂದು. ಹೀಗೆ ಒಂಭತ್ತು ತಿಂಗಳ ನಂತರ ನಾನೊಂದು ಸುಂದರ ಗಂಡು ಮಗುವಿಗೆ ಜನ್ಮವಿತ್ತೆ. ಅನೂಪ್ ಎಂದು ನಾಮಕರಣ ಮಾಡಿದೆವು ಆತನಿಗೆ. ನನ್ನದೇ ಪ್ರತಿರೂಪವಾಗಿದ್ದ ಅನೂಪ್. ಅವನನ್ನು ಕಂಡು ಚಿರಾಗ್ ಕೂಡಾ ತುಂಬಾ ಖುಷಿ ಪಟ್ಟರು. ಬಾಹ್ಯ ಪ್ರಪಂಚಕ್ಕೆ ತಾನೊಬ್ಬ ತಂದೆಯಾದೆ ಎಂದು ತೋರಿಸಿಕೊಟ್ಟ ಹೆಮ್ಮೆ ಅವರಿಗೆ. ಹಾಗೆಯೇ ನನ್ನ ಮಡಿಲು ತುಂಬಿದ ಖುಷಿ ಕೂಡಾ.

ಅನೂಪ್ ನಮ್ಮಿರ್ವರ ಪ್ರೀತಿಯ ಮಡಿಲಲ್ಲಿ ಸುಂದರವಾಗಿ ಬೆಳೆಯುತ್ತಿದ್ದ. ದಿನಗಳು ಉರುಳುತ್ತಿದ್ದವು. ಪ್ರೀತಂನೂ ಆಗಾಗ್ಗೆ ಮಗುವನ್ನು ನೋಡಲು ಬರುತ್ತಿದ್ದ. ಮಗುವಿನ ಮೂಲಕ ನನ್ನ- ಪ್ರೀತಂನ ಗೆಳೆತನ ಗಟ್ಟಿಯಾಗತೊಡಗಿತು. ನನ್ನ ಮಡಿಲು ತುಂಬಿದವನೆಂಬ ಗೌರವ ಭಾವನೆ ನನಗೆ ಆತನಲ್ಲಿ. ಮಗುವನ್ನು ಕಾಣುವಾಗ ಆತನ ಮುಖದಲ್ಲಿ ಮೂಡುವ ಸಂತೋಷ ಉತ್ಸಾಹ ಕಂಡು ನನಗೂ ತುಂಬಾ ಸಂತೋಷವಾಗುತ್ತಿತ್ತು. ಮಗುವನ್ನು ನೋಡಿದಾಗಲೆಲ್ಲಾ ಪ್ರೀತಂನ ನೆನಪಾಗತೊಡಗುತ್ತಿತ್ತು. ಒಂದು ದಿನ ಆತ ಮಗುವನ್ನು ನೋಡಲು ಬರಲಿಲ್ಲವಾದರೆ ಇಂದೇಕೆ ಪ್ರೀತಂ ಬರಲಿಲ್ಲ ಎಂದು ಯೋಚಿಸುತ್ತಿದ್ದೆ. ಪ್ರೀತಂನನ್ನು ನೋಡುವ, ಮಾತನಾಡುವ ತುಡಿತ ನನ್ನಲ್ಲಿ ಜಾಸ್ತಿಯಾಗತೊಡಗಿತು. ನಾನು ಅವನತ್ತ ಸೆಳೆಯುತ್ತಿದ್ದೇನೆ ಎನ್ನುವ ಅರಿವು ಪ್ರೀತಂನಿಗೂ ಆಗಿತ್ತು. ನನ್ನ ಭಾವನೆಗಳನ್ನು ಆತ ತಿರಸ್ಕರಿಸದೆ ನೀರೆರೆಯಲಾರಂಭಿಸಿದ. ನಮ್ಮ ಸಂಬಂಧ ದಿನೇ ದಿನೇ ಗಾಢವಾಗಿ ಪ್ರೀತಿಗೆ ತಿರುಗಿತ್ತು. ಹಿಂದೆ ಕೇವಲ ಸಹೋದ್ಯೋಗಿಯಾಗಿದ್ದ ಪ್ರೀತಂ ಇಂದು ನನಗೆ ಅತೀ ಹತ್ತಿರದವನಾದ. ಈ ನಡುವೆ ಚಿರಾಗ್‌ನ ಮುಖ ಕಣ್ಣೆದುರು ಬಂದಾಗ ಕುಗ್ಗಿ ಹೋಗುತ್ತಿದ್ದೆ. ಮತ್ತೊಮ್ಮೆ ಅನ್ನಿಸುತ್ತಿತ್ತು. ನನ್ನ ಮಡಿಲಿಗೆ ಮಗುವೊಂದನ್ನು ಹಾಕಿದ ಪ್ರೀತಂನ ಎದುರು ಎಲ್ಲರೂ, ಎಲ್ಲವೂ ಶೂನ್ಯ ಎಂದು. ಪ್ರೀತಂ ಕೂಡಾ ನನ್ನನ್ನು ಪ್ರೀತಿಸುತ್ತಿದ್ದಾನೆ ಎನ್ನುವ ಹುಚ್ಚು ಧೈರ್ಯದಿಂದ ನನ್ನ ಚಿರಾಗ್‌ನ ಪ್ರೀತಿಯನ್ನು ಪ್ರೀತಂನಿಗೂ ಹಂಚಿದೆ. ನನ್ನ ಒತ್ತಾಯಕ್ಕೆ ಮಣಿದು ನನ್ನನ್ನು ದೇವಸ್ಥಾನವೊಂದಕ್ಕೆ ಕರೆದುಕೊಂಡು ಹೋಗಿ ದೇವರ ಸನ್ನಿಧಿಯಲ್ಲಿ ನನ್ನ ಹಣೆಗೆ ಕುಂಕುಮವಿಟ್ಟ ಪ್ರೀತಂ. ಅಂದಿನಿಂದ ನಮ್ಮಿಬ್ಬರ ದೈಹಿಕ ಸಂಬಂಧವೂ ಪ್ರಾರಂಭಗೊಂಡಿತ್ತು. ನಾನಂತೂ ಪ್ರೀತಂ ಇಲ್ಲದೆ ಬದುಕಲಾರೆ ಎನ್ನುವ ಸ್ಥಿತಿಗೆ ಬಂದು ಮುಟ್ಟಿದ್ದೆ. ಹೀಗೆ ನನ್ನ ಬದುಕು ಚಿರಾಗ್- ಪ್ರೀತಂ ಎನ್ನುವ ಎರಡು ವ್ಯಕ್ತಿಗಳ ನಡುವೆ ದ್ವಂದ್ವ ಮನಸ್ಸಿನೊಂದಿಗೆ ನಡೆಯುತ್ತಿತ್ತು. ಅನೂಪ್‌ಗೆ ಪ್ರೀತಿಯೂ ತೋರಿಸುತ್ತಿದ್ದೆ. ಚಿರಾಗ್‌ನ ಭಾವನೆಗಳಿಗೂ ಸ್ಪಂದಿಸುತ್ತಾ ಪತಿವ್ರತೆಯಂತೆ ನಟಿಸುತ್ತಿದ್ದೆ. ಆದರೆ ನನ್ನ ಒಳಮನಸ್ಸಿನಲ್ಲಿ ಸಮಾಧಾನವಿರಲಿಲ್ಲ. ತಪ್ಪಿತಸ್ಥ ಭಾವನೆ ಕಾಡುತ್ತಿತ್ತು. ಆದರೂ ಪ್ರೀತಂನನ್ನಾಗಲೀ, ಚಿರಾಗ್‌ನನ್ನಾಗಲೀ ಇಬ್ಬರಲ್ಲಿ ಒಬ್ಬರನ್ನೂ ದೂರ ಮಾಡಿ ಇರಲಾರದ ಅಸಹಾಯಕ ಸ್ಥಿತಿಗೆ ಬಂದು ಮುಟ್ಟಿದ್ದೆ ನಾನು.

ಅದೊಂದು ದಿನ ನನ್ನ ಬದುಕಿನ ಮೈಲುಗಲ್ಲಾಗಿತ್ತು. ಆ ದಿನ ನನ್ನ ಪಾಲಿಗೆ ಕೆಟ್ಟದಿನವಾಗಿದ್ದರೂ ನನ್ನ ಜೀವನದ ಅಂಧಕಾರಕ್ಕೆ ಅಲ್ಪಕಾಲದ ಉನ್ಮತ್ತತೆಗೆ ಉತ್ತರ ದೊರೆತ ದಿನವಾಗಿತ್ತು. ಪರಪುರುಷನ ಪ್ರೀತಿಗೆ ಸಿಲುಕಿ ದೇವರಂತಹ ಚಿರಾಗ್‌ನಿಗೆ ದ್ರೋಹ ಮಾಡಿದುದಕ್ಕೆ ಸರಿಯಾದ ಉತ್ತರ ನನಗಂದು ದೊರಕಿತ್ತು.

ಅಂದು ಭಾನುವಾರವಾದುದರಿಂದ ಪ್ರೀತಂನಿಗೂ ಡ್ಯೂಟಿಗೆ ರಜೆ. ನನಗೂ ರಜೆಯಿತ್ತು. ಆದರೆ ಏನೋ ಒಂದು ಎಮರ್ಜೆನ್ಸಿ ಕೇಸ್ ಇದ್ದುದರಿಂದ ಆಸ್ಪತ್ರೆಯಿಂದ ನನಗೆ ಕಾಲ್ ಬಂದಿತ್ತು. ಪೇಷಂಟ್‌ನ್ನು ನೋಡಿ ಟ್ರೀಟ್‌ಮೆಂಟ್‌ನ ಎಲ್ಲಾ ವ್ಯವಸ್ಥೆ ಮಾಡಿ ಹಿಂತಿರುಗುವಾಗ ಪ್ರೀತಂನ ನೆನಪಾಗಿ ಅವನ ಮನೆಯತ್ತ ತೆರಳಿದೆ. ಹೇಗೂ ಅವನ ಹೆಂಡತಿ, ಮಗು ಊರಿಗೆ ಹೋಗಿದ್ದಾರೆ ಎಂದು ನನಗೆ ಗೊತ್ತಿತ್ತು. ಮನೆಯ ಕರೆಗಂಟೆ ಬಾರಿಸಿದಾಗ ಬಾಗಿಲು ತೆರೆದವನೇ ಪ್ರೀತಂ. ನನ್ನನ್ನು ನೋಡಿದಾಗ ಆತನ ಮುಖದಲ್ಲಿ ಗಾಬರಿ! ಆತನ ಮುಖದಲ್ಲಾದ ಬದಲಾವಣೆಯನ್ನು ಕಂಡು ನನಗೂ ಕಸಿವಿಸಿಯಾಯಿತು. 'ಏನಾಯಿತು ಪ್ರೀತಂ?' ಎನ್ನುತ್ತಾ ಒಳನಡೆದೆ. ಒಳಗೆ ಕಂಡದ್ದೇನು? ನಮ್ಮಿಬ್ಬರ ಕೈಕೆಳಗೆ ಕೆಲಸ ಮಾಡುವ ನರ್ಸ್ ಶಿಖಾ ಆತುರದಿಂದ ಮೈಮೇಲಿದ್ದ ಡ್ರೆಸ್ಸನ್ನು ಸರಿಪಡಿಸುತ್ತಿದ್ದಳು. ಅವಳ ಕೆದರಿದ ಕೂದಲು, ಅಸ್ತವ್ಯಸ್ತವಾದ ಪ್ರೀತಂನ ಹಾಸಿಗೆ, ಇಬ್ಬರ ಮುಖದಲ್ಲಿದ್ದ ಅಪರಾಧಿ ಭಾವನೆ ಎಲ್ಲವೂ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿತ್ತು. ನನ್ನನ್ನು ಕಂಡವಳೇ 'ನಮಸ್ತೆ ಮೇಡಂ' ಎಂದು ತಲೆ ತಗ್ಗಿಸಿ ಹೊರನಡೆದಳು. ಅವಳ ಕೆನ್ನೆಗೆ ಬಾರಿಸುವ ಮನಸ್ಸಾಯಿತು. ಆದರೆ ನೀನ್ಯಾರು ಎಂದು ಅವಳು ಕೇಳಿದರೆ ?! ಅವಳು ಹೋಗುವ ತನಕ ಮೌನವಾಗಿದ್ದ ನಾನು ಪ್ರೀತಂನ ಎದುರು ಕುಸಿದು ಬೊಬ್ಬಿಡಲಾರಂಭಿಸಿದೆ.

"ಚಿರಾಗ್‌ನಂತಹ ಮನುಷ್ಯನಿಗೆ ಮೋಸ ಮಾಡಿ ನಿನ್ನ ಹಿಂದೆ ಬಂದುದಕ್ಕೆ ಈ ರೀತಿಯ ದ್ರೋಹವೇ ಪ್ರೀತಂ ?" ಎಂದು ಚೀರಿದೆ. ಪ್ರೀತಂ ನಿಧಾನವಾಗಿ ಉತ್ತರಿಸಿದ, "ನನ್ನ ಶಿಖಾ ಸಂಬಂಧ ನನ್ನ ವಿವಾಹದ ಮೊದಲಿನಿಂದಲೂ ಇತ್ತು ಕ್ಷಮಿಸು" ಎಂದ. "ಮತ್ತೆ ನನ್ನನ್ನೇಕೆ ಪ್ರೀತಿಸುವ ನಾಟಕವಾಡಿದೆ. ನನ್ನ ಹಣೆಗೆ ಕುಂಕುಮವಿಡುವ ನಾಟಕವಾಡಿದಂತೆ ಅವಳ ಹಣೆಗೂ ಇಟ್ಟಿದ್ದೀಯಾ? ಎಂದು ಕೂಗಾಡಿದೆ. ಪ್ರೀತಂ ಉತ್ತರಿಸಿದ. "ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂಬ ಭ್ರಮೆಯಿಂದ ನೀನೇ ನನ್ನ ಹಿಂದೆ ಬಂದೆ. ನಾನು ಮಗುವನ್ನು ನೋಡಲು ಬರುತ್ತಿದ್ದೆ. ಆದರೆ ನೀನು ಬೇರೆಯೇ ಅರ್ಥ ಕಲ್ಪಿಸಿಕೊಂಡೆ. ನಿನ್ನನ್ನು ನೋವುಗೊಳಿಸಬಾರದು ಎಂದು ನಾನು ನಿನ್ನ ಭಾವನೆಗಳಿಗೆ ಸ್ಪಂದಿಸಿದೆ. ನಿನ್ನ ಹಣೆಗೆ ಕುಂಕುಮವಿಟ್ಟೆ. ಶಿಖಾಗೆ ಈ ನಂಬಿಕೆಗಳಲ್ಲಿ ವಿಶ್ವಾಸವಿಲ್ಲ. ಆದರೆ ಅವಳು ಮತ್ತು ನನ್ನದು ಮುರಿಯಲಾರದ ಗಾಢ ಸಂಬಂಧ. ನನ್ನ ಪತ್ನಿಗೆ ತಿಳಿದರೂ ನಾನು ಶಿಖಾಳನ್ನು ಮಾತ್ರ ದೂರ ಮಾಡುವಂತಿಲ್ಲ. ನಿನಗೆ ಇಷ್ಟವಿದ್ದರೆ ನನ್ನೊಂದಿಗೆ ಇರು. ಇಲ್ಲದಿದ್ದರೆ ಒತ್ತಾಯವಿಲ್ಲ" ಪ್ರೀತಂನ ಕಡ್ಡಿ ತುಂಡು ಮಾಡಿದಂತಹ ನೇರ ಮಾತುಗಳನ್ನು ಕೇಳಿ ಅಲ್ಲಿಯೇ ಕುಸಿದೆ. ಕೊನೆಯದಾಗಿ ನನ್ನ ಮನದಲ್ಲಿದ್ದಂತಹ ಪ್ರಶ್ನೆಯೊಂದನ್ನು ಕೇಳಿದೆ "ಮತ್ತೆ ಅನೂಪ್?" ಪ್ರೀತಂ ಶಾಂತವಾಗಿ ಉತ್ತರಿಸಿದ, "ಅನೂಪ್ ನಿನ್ನ ಹಾಗೂ ಚಿರಾಗ್‌ನ ಮಗು. ಅನೂಪ್ ಬದುಕಿಗೆ ನಾನೆಂದೂ ಮುಳ್ಳಾಗಲಾರೆ. ಬೇಡವೆಂದರೆ ಇನ್ನು ಮುಂದೆ ನಾನು ಅವನನ್ನು ನೋಡಲೂ ನಿನ್ನ ಮನೆಗೆ ಬರಲಾರೆ. ನನ್ನಿಂದ ನಿಮ್ಮ ಸಂಸಾರಕ್ಕೆ ಏನೂ ತೊಂದರೆ ಬರಲಾರದು" ಎಂದು ಪ್ರೀತಂನ ದೃಢ ಮಾತಿನಿಂದ ಅನೂಪ್‌ನಿಗೆ ಏನೂ ತೊಂದರೆಯಿಲ್ಲ ಎಂದು ತಿಳಿದು ಮಾತ್ರ ಹೃದಯಕ್ಕೆ ಸಮಾಧಾನವಾದರೂ, ಅವನು ತನಗೆ ಮಾಡಿದ ದ್ರೋಹವನ್ನು ಎಣಿಸಿ ಬಿಕ್ಕುತ್ತಾ, ಅಳುತ್ತಾ ಅಂಧಕಾರದ ಬದುಕಿನಿಂದ ಬೆಳಕನ್ನು ಅರಸುತ್ತಾ ಹೊರಬಂದೆ.

ಈ ಘಟನೆಯ ನಂತರ ನಾನು ಮಾನಸಿಕವಾಗಿ ಕುಬ್ಜಳಾದೆ. ಚಿರಾಗ್‌ಗೆ ದ್ರೋಹ ಮಾಡಿದೆ ಎನ್ನುವ ಚಿಂತೆ ನನ್ನನ್ನು ಹಗಲಿರುಳೆನ್ನದೆ ಕಾಡತೊಡಗಿತು. ನನ್ನಲ್ಲಾದ ತಪ್ಪಿಗೆ ಕ್ಷಮೆಯೇ ಇರಲಿಲ್ಲ. ಚಿರಾಗ್‌ನನ್ನು ಎದುರಿಸುವ ಶಕ್ತಿಯೂ ಇರಲಿಲ್ಲ. ಪ್ರೀತಂನ ಪ್ರತಿರೂಪವಾದ ಅನೂಪ್‌ನನ್ನು ಕಂಡಾಗ ನನ್ನ ಕೋಪ ಉಕ್ಕೇರುತ್ತಿತ್ತು. ಮಗುವೆಂದು ಎಣಿಸದೆ ನಾನು ಅವನಿಗೆ ಹೊಡೆಯುತ್ತಿದ್ದೆ. ಸಣ್ಣ ಕಾರಣಕ್ಕೂ ಅವನ ಮೇಲೆ ರೇಗಾಡುತ್ತಿದ್ದೆ. ಅವನ ಅಳು ಹೆತ್ತ ಕರುಳಿಗೂ ತಲುಪಲಾರದಷ್ಟು ಕಠಿಣಳಾಗಿ ಹೋದೆ ನಾನು. ದಿನೇ ದಿನೇ ನನ್ನ ಬದುಕು ಅಸ್ತವ್ಯಸ್ತವಾಗತೊಡಗಿತ್ತು. ಚಿರಾಗ್‌ನೊಂದಿಗೂ ಹಿಂದಿನಂತೆ ಇರಲಾರದೆ ಮಾನಸಿಕವಾಗಿ ನಾನು ತುಂಬಾ ಅಸ್ವಸ್ಥಳಾದೆ. ಆದರೆ ಈ ರೀತಿ ನಾನು ಎಷ್ಟು ದಿನ ಇರಲಿ? ಕೊನೆಗೂ ನಾನೊಂದು ನಿರ್ಧಾರಕ್ಕೆ ಬಂದೆ. ನಡೆದ ಎಲ್ಲಾ ವಿಷಯಗಳನ್ನು ಚಿರಾಗ್‌ಗೆ ತಿಳಿಸಿ ಅವರಿಂದ ಸಿಗುವ ಉತ್ತರದಿಂದ ನನ್ನ ಬದುಕನ್ನು ನಿರ್ಧರಿಸಬೇಕು ಎಂದು. ಆತ ನನ್ನನ್ನು ಕ್ಷಮಿಸಿದರೆ ಆಯಿತು. ಇಲ್ಲದಿದ್ದರೆ ಈ ನನ್ನ ಪಾಪಿ ಮುಖವನ್ನು ಅವರಿಗೆ ಮತ್ತೆಂದೂ ತೋರಿಸಬಾರದು ಎಂದುಕೊಂಡು ಅಂದಿನ ದಿನ ಚಿರಾಗ್‌ನ ಆಗಮನಕ್ಕಾಗಿ ಕಾದೆ.

ಅಂದು ನನ್ನ ಬದುಕಿನ ಸತ್ಯವನ್ನು ಚಿರಾಗ್‌ನಲ್ಲಿ ಬಿಚ್ಚಿಡುವ ದಿನವಾಗಿತ್ತು. ಚಿರಾಗ್ ಸಂಜೆ ಡ್ಯೂಟಿಯಿಂದ ಬಂದ ನಂತರ ಅವರನ್ನು ಕುಳ್ಳಿರಿಸಿ ದಿನಾಲೂ ನನ್ನ ಮಾನಸಿಕ ಅಸ್ವಸ್ಥತೆಗೆ ಕಾರಣ ಕೇಳುತ್ತಿದ್ದ ಅವರಿಗೆ ನಡೆದ ಎಲ್ಲಾ ವಿಷಯಗಳನ್ನು

ವಿವರಿಸಿದೆ. ಅನೂಪ್ ಹೇಗಾದ ಎಂಬುದರಿಂದ ಹಿಡಿದು ನನ್ನ ಪ್ರೀತಂ ಸಂಬಂಧ, ಆತ ನನಗೆ ಕೊಟ್ಟ ಆಘಾತ ಎಲ್ಲವನ್ನೂ ಬಿಡದೆ ವಿವರಿಸಿದೆ. ಉಕ್ಕಿ ಬರುತ್ತಿದ್ದ ಕಣ್ಣೀರನ್ನು ಒರೆಸುತ್ತಾ ಎಲ್ಲಾ ಸತ್ಯವನ್ನು ಅರುಹಿದೆ. ಎಲ್ಲವನ್ನೂ ಹೇಳಿ ಮುಗಿಸಿ ಚಿರಾಗ್‌ನನ್ನು ನೋಡುವ ಧೈರ್ಯ ಸಾಲದೆ ತಲೆತಗ್ಗಿಸಿ ಬಿಕ್ಕುತ್ತಾ ಕುಳಿತೆ. ಈಗ ಚಿರಾಗ್ ನನ್ನ ಬಳಿ ಬಂದು ನನ್ನ ಕತ್ತು ಹಿಸುಕಬಹುದು, ಅಲ್ಲವೇ ಬಳಿ ಬಂದು ಕೆನ್ನೆಗೆ ಛಟೀರೆಂದು ಬಾರಿಸಬಹುದು ಎಂದು ಯೋಚಿಸುತ್ತಾ ಎಲ್ಲದಕ್ಕೂ ತಯಾರಾಗಿ ಕುಳಿತಿದ್ದೆ ನಾನು. ಆದರೆ! ಕೆಲಹೊತ್ತು ಕಳೆದರೂ ಚಿರಾಗ್‌ನ ಪ್ರತ್ಯುತ್ತರವೇ ಇಲ್ಲ! ಮೌನವಾಗಿ ತಲೆಯೆತ್ತಿ ನೋಡಿದೆ. ಚಿರಾಗ್ ಧಾರಾಕಾರವಾಗಿ ಇಳಿಯುತ್ತಿರುವ ಕಣ್ಣೀರನ್ನು ಒರೆಸುವ ಪ್ರಯತ್ನದಲ್ಲಿದ್ದಾರೆ ! ತಲೆ ಬಗ್ಗಿಸಿ ರೋಧಿಸುತ್ತಿದ್ದಾರೆ! ತಡೆಯಲಾರದೆ ಅವರ ಬಳಿ ತೆರಳಿದೆ. ಚಿರಾಗ್ ನನ್ನನ್ನು ಮಗುವಿನಂತೆ ಅಪ್ಪಿಕೊಂಡರು. "ಅನೂ ನೀನು ನನಗೆ ದ್ರೋಹ ಮಾಡಿದೆ. ನನ್ನ ಪ್ರೀತಿಗೆ ಮಣ್ಣೆರಚಿದೆ. ಈಗ ನೀನೇ ನೀನಾಗಿ ಈ ಪಾಪದಿಂದ ಮುಕ್ತಳಾಗಿ ಬಂದಿದ್ದೀಯಾದರೆ ನಾನು ನಿನ್ನನ್ನು ಕ್ಷಮಿಸುತ್ತೇನೆ. ಮತ್ತೆ ನನಗೆ ಈ ರೀತಿ ಆಘಾತ ಕೊಡುವುದಿಲ್ಲ ಎಂದು ಪ್ರಮಾಣ ಮಾಡುತ್ತೀಯಾದರೆ ನಿನ್ನನ್ನು ನನ್ನ ಹಿಂದಿನ ಅನುವಾಗಿಯೇ ಸ್ವೀಕರಿಸುತ್ತೇನೆ, ಯಾಕೆಂದರೆ ಅನೂ ನಿನ್ನಿಂದ ದೂರಾಗಿ ಬದುಕುವ ಶಕ್ತಿಯನ್ನು ಆ ದೇವರು ನನಗೆ ಇನ್ನೂ ನೀಡಿಲ್ಲ" ಎಂದಾಗ ಅವರ ಕಣ್ಣಲ್ಲಿ ಚಿಮ್ಮುತ್ತಿದ್ದ ನೀರಿನಿಂದ ನನ್ನ ಪಾಪಗಳನ್ನೆಲ್ಲಾ ತೊಳೆದುಕೊಂಡೆ. ಅವರ ಮಡಿಲಲ್ಲಿ ತಲೆಯಿಟ್ಟು ಅತ್ತೆ. "ಇನ್ನು ಹೀಗಾಗಲಾರದು. ಚಿರಾಗ್ ಕ್ಷಮಿಸಿ ನನ್ನ" ಎಂದು. ತಂದೆ- ತಾಯಿಯ ಅಳುವಿನ ಶಬ್ದ ಕೇಳಿ ಒಳಗೆ ರೂಮಿನಲ್ಲಿ ಮಲಗಿದ್ದ ಅನೂಪ್ ಕೂಡಾ ಎಚ್ಚೆತ್ತು ಅಳುತ್ತಲೇ ಹೊರಗೆ ಬಂದ. ಕ್ಷಣ ಮಾತ್ರದಲ್ಲಿ ಎಚ್ಚೆತ್ತ ನಾವು ಅನೂಪ್‌ನನ್ನು ನಮ್ಮೆಡೆಗೆ ಸೆಳೆದುಕೊಂಡೆವು. ಚಿರಾಗ್ ಅನೂಪ್‌ನನ್ನು ಎದೆಗೊತ್ತಿಕೊಂಡು ಅಂದರು, "ಅನೂ, ಪ್ರೀತಂನನ್ನು ಕ್ಷಮಿಸಿ ಬಿಡು, ಬರಡಾದ ನಮ್ಮ ಮಡಿಲನ್ನು ನಿಷ್ಕಲ್ಮಶ ಮನಸ್ಸಿನಿಂದ ತುಂಬಿ ಕೊಟ್ಟಿದ್ದಾನೆ ಆತ. ಆತನನ್ನು ದ್ವೇಷಿಸಬೇಡ. ಮುಂಚಿನಂತೆಯೇ ಉತ್ತಮ ಸಹೋದ್ಯೋಗಿಗಳಾಗಿ ಇರಿ" ಎಂದಾಗ ಚಿರಾಗ್‌ನ ವಿಶಾಲ ವ್ಯಕ್ತಿತ್ವಕ್ಕೆ ಸೋತು ಕರಗಿ ಅವರ ಕಾಲಿಗೆ ಕುಸಿದು ಬಿದ್ದೆ. "ಏಳು ಅನೂ, ಕ್ಷಮಿಸಿದ್ದೇನೆ ನಿನ್ನನ್ನು, ಇನ್ನು ಮಾತ್ರ ಅಳಬೇಡ" ಎಂದು ಚಿರಾಗ್ ಎಬ್ಬಿಸಿದಾಗ ಅನೂಪ್ ನನ್ನ ಮುಖ ನೋಡಿ ನಕ್ಕ. ರಣಬಿಸಿಲಿಗೆ ಕರಟಿ ಹೋಗುವುದರಲ್ಲಿದ್ದ ನನ್ನ ಬದುಕು ಮತ್ತೆ ಮುಸ್ಸಂಜೆಯ ತಂಗಾಳಿ ಬೀಸಿ ಅರಳಿತ್ತು. ●

# ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಶಿಮುಂಜೆ ಪರಾರಿ ಸಾಹಿತ್ಯ ಸಂಭ್ರಮ

## ವಿಚಾರ ಸಂಕಿರಣ, ಅಭಿನಂದನ ಗ್ರಂಥ ಬಿಡುಗಡೆ, ಗೌರವಾರ್ಪಣೆ




ಕನ್ನಡದ ಹಿರಿಯ ಸಾಹಿತಿ, ಕವಿ, ಚಿಂತಕ ಶಿಮುಂಜೆ ಪರಾರಿ ಅವರ ಅಭಿನಂದನ ಸಮಾರಂಭವನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಶಿಮುಂಜೆ ಪರಾರಿ ಅಭಿನಂದನ ಸಮಿತಿ ಮುಂಬಯಿ ಅವರ ಜಂಟಿ ಆಶ್ರಯದಲ್ಲಿ ಇತ್ತೀಚೆಗೆ ಅಪರಾಹ್ನ 2ರಿಂದ ಸಾಂತಾಕ್ರೂಜ್ (ಪೂ) ವಿದ್ಯಾನಗರಿಯ ಮುಂಬಯಿ ವಿಶ್ವವಿದ್ಯಾಲಯದ ಕವಿವರ್ಯ ಕುಸುಮಾಗ್ರಜ ಮರಾಠಿ ಭಾಷಾ ಭವನದಲ್ಲಿ ಆಯೋಜಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಉದ್ಯಮಿ ದಿವಾಕರ್.ಎನ್.ಶೆಟ್ಟಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಚಂದ್ರಶೇಖರ ಪಾಲೆತ್ತಾಡಿ, ಬಂಟರ ಸಂಘ ಅಂಧೇರಿ–ಬಾಂದ್ರಾ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಗುಣಪಾಲ ಶೆಟ್ಟಿ ಐಕಳ, ನ್ಯಾಯವಾದಿ ಕಡಂದಲೆ ಪರಾರಿ ಪ್ರಕಾಶ್.ಎಲ್.ಶೆಟ್ಟಿ, ಹೋಟೇಲ್ ಅವೆನ್ಯೂ ಮಾಲಕರಾದ ರಘುರಾಮ್ ಶೆಟ್ಟಿ, ಕ್ವಾಲಿಟಿ ಕೆಟರರ್ಸ್‌ನ ಮಾಲಕರಾದ ಭುಜಂಗ ಶೆಟ್ಟಿ ಮೊದಲಾದವರು ಪಾಲ್ಗೊಂಡಿದ್ದರು. ಸಮಾರಂಭದಲ್ಲಿ ಡಾ.ಜಿ.ಎನ್.ಉಪಾಧ್ಯ ಅವರ ಗೌರವ ಸಂಪಾದಕತ್ವದಲ್ಲಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ 'ಸಂಪ್ರೀತಿ' ಅಭಿನಂದನ ಗ್ರಂಥವನ್ನು ಗಣ್ಯರು ಬಿಡುಗಡೆಗೊಳಿಸಿದರು. ಗಣ್ಯರ ಸಮ್ಮುಖದಲ್ಲಿ ಸಾಹಿತಿ ಶಿಮುಂಜೆ ಪರಾರಿ ಅವರನ್ನು ಶಾಲು ಹೊದಿಸಿ ಮೈಸೂರು ಪೇಟ ತೊಡಿಸಿ, ಫಲಪುಷ್ಪ ಸ್ಮರಣಿಕೆ, ಸನ್ಮಾನ ಪತ್ರ ಹಾಗೂ ಒಂದೂವರೆ ಲಕ್ಷ ರೂಪಾಯಿಗಳ ಹಮ್ಮಿಣಿಯನ್ನಿತ್ತು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶಿಮುಂಜೆ ಪರಾರಿ ಅವರ ಜೀವನ ಮತ್ತು ಸಾಹಿತ್ಯ ಸಾಧನೆಯ ವಿಚಾರ ಸಂಕಿರಣ ನಡೆಯಿತು. ಶಿಮುಂಜೆ ಪರಾರಿ ಅವರ ಜೀವನ ಸಾಧನೆಯು ಕುರಿತು ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಪೂರ್ಣಿಮಾ.ಎಸ್.ಶೆಟ್ಟಿ, ಶಿಮುಂಜೆಯವರ ನಿತ್ಯ ಆನಂದ ವಚನದ ಕುರಿತು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು, ಅನುವಾದ ಸಾಹಿತ್ಯದ ಕುರಿತಾಗಿ ಕವಿ, ಲೇಖಕ ಡಾ.ಕರುಣಾಕರ ಶೆಟ್ಟಿ, ತುಳು ಸಾಹಿತ್ಯಕ್ಕೆ ಶಿಮುಂಜೆಯವರ ಕೊಡುಗೆಯ ಕುರಿತಾಗಿ ಕವಿ, ಸಂಘಟಕ ಪೇತ್ರಿ ವಿಶ್ವನಾಥ ಶೆಟ್ಟಿ ಅವರು ಉಪನ್ಯಾಸ ನೀಡಿದರು. ಹಿರಿಯ ಸಾಹಿತಿ, ಕವಿ ಬಿ.ಎಸ್.ಕುರ್ಕಾಲ್ ಅವರು ಸ್ವಾಗತಿಸಿದರು. ಕವಿ ಸಾಹಿತಿ ಜೀವಿ ಕುಲಕರ್ಣಿ ಅವರು ಅಭಿನಂದನ ಭಾಷಣಗೈದರು. ಸಮಾರಂಭದಲ್ಲಿ ವಿದುಷಿ ವೀಣಾ ಶಾಸ್ತ್ರಿ, ಲಕ್ಷ್ಮೀ ಶೆಟ್ಟಿ ಹಾಗೂ ಸುಶೀಲಾ ದೇವಾಡಿಗ ಅವರ ಕಾವ್ಯಗಾಯನ ಕಾರ್ಯಕ್ರಮ ನಡೆಯಿತು. ಸಂಘಟಕ ಪೇಟೆಮನೆ ಪ್ರಕಾಶ್ ಶೆಟ್ಟಿ ಅವರು ಕಾರ್ಯಕ್ರಮ ನಿರೂಪಿಸಿದರು. ಸಂಪಾದಕ ಮಂಡಳಿಯ ಜಿ.ಟಿ.ಆಚಾರ್ಯ ಅವರು ವಂದಿಸಿದರು.

# ಹೆಮ್ಮೆಯ ಗಮಕ ಕಲಾವಿದ ಎಂ.ಎ.ಜಯರಾಮ ರಾವ್

ಕನ್ನಡದ ಹೆಸರಾಂತ ಗಮಕ ಕಲಾವಿದರಲ್ಲಿ ಎಂ.ಎ. ಜಯರಾಮ ರಾವ್ ಅವರು ಒಬ್ಬರು. ವೃತ್ತಿಯಲ್ಲಿ ಪತ್ರಕರ್ತರಾಗಿ ದುಡಿದ ಅವರು ಗಮಕದ ತೇರನ್ನು ಎಳೆದ ಅಪೂರ್ವ ಸಾಧಕ. ಈಗ ಅವರಿಗೆ ೮೧ರ ಸಂಭ್ರಮ. ಈ ಬಾರಿಯ ಪ್ರತಿಷ್ಠಿತ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ. ಜಯರಾಮ್ ರಾವ್ ಅವರ ಜೀವನ ಸಾಧನೆಯ ಕಿರುನೋಟವಿಲ್ಲಿದೆ.

ಗಮಕ ಕಲೆ ಕರ್ನಾಟಕದ ವಿಶಿಷ್ಟವಾದ ಒಂದು ಕಲೆ. ಹಿಂದೆ ರಾಜ ಮಹಾರಾಜರ ಆಸ್ಥಾನಗಳಲ್ಲಿ ಕವಿಗೆ ಮೊದಲ ಸ್ಥಾನವಾದರೆ ಅನಂತರದ್ದು ಗಮಕಿಯ ಸ್ಥಾನ. ಕಾವ್ಯವನ್ನು ಶ್ರವಣಸುಧಾರಸವನ್ನಾಗಿ ಮಾಡುವಲ್ಲಿ ಗಮಕಿಯ ಪಾತ್ರ ಪ್ರಧಾನವಾದುದು. ಗಮಕ ಕಲೆ ಮೈಸೂರು ಮಹಾರಾಜರ ಕಾಲದಲ್ಲಿ ವಿಶೇಷವಾದ ಬೆಳವಣಿಗೆಯನ್ನು ಕಂಡಿತು. ಅನಂತರ ಕನ್ನಡ ಸಾಹಿತ್ಯ ಪರಿಷತ್ತು ಗಮಕ ಕಲೆಯ ವಿಕಾಸಕೆ" ಶ್ರಮಿಸಿದ್ದು ಈಗ ಇತಿಹಾಸ. ನಮ್ಮ ಪ್ರಾಚೀನ ಕಾವ್ಯವನ್ನು ಜನಮನಕೆ" ಮುಟ್ಟಿಸುತ್ತಾ ಬಂದ ಶ್ರೇಯಸ್ಸು ಗಮಕಿಗಳಿಗೆ ಸಲ್ಲುತ್ತದೆ. ಗಮಕ ಕಲೆಯ ಉನ್ನತಿಗೆ ಶ್ರಮಿಸುತ್ತಾ ಬಂದ ಹಿರಿಯರಲ್ಲಿ ಗಮಕ ವಿದ್ವಾನ್ ಎಂ.ಎ.ಜಯರಾಮ ರಾವ್ ಅವರೂ ಒಬ್ಬರು. ಎಂ.ಎ.ಜಯರಾಮ ರಾವ್ ಅವರು ಕರ್ನಾಟಕದ ನಾಮಾಂಕಿತ ಗಮಕಿಗಳಲ್ಲಿ ಒಬ್ಬರು. ಅವರದು ಬಹುಮುಖ ಪ್ರತಿಭೆ. ಅವರು ಗಮಕ ಕಲೆಯ ವಾಚನ ವ್ಯಾಖ್ಯಾನಗಳಲ್ಲಿ ಪ್ರಧಾನವಾಗಿ ತೊಡಗಿಸಿಕೊಂಡಿದ್ದರೂ ಸಂಗೀತ ಸಾಹಿತ್ಯ ಕ್ಷೇತ್ರಗಳಲ್ಲೂ ಸಾಕಷ್ಟು ಸಾಧನೆಗೈದಿದ್ದಾರೆ. 'ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿದೆತ್ತ ಸಂಬಂಧವಯ್ಯಾ' ಎಂಬಂತೆ ರಾವ್ ಅವರ ವೃತ್ತಿ ಪ್ರವೃತ್ತಿಗಳಲ್ಲಿ ಅಜಗಜ ಅಂತರ. ರಾವ್ ಅವರು ಬಹುಕಾಲ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿರಾದರು. ಆದರೆ, ಪ್ರವೃತ್ತಿಯಿಂದ ಜಯರಾಮ ರಾವ್ ಅವರು ಗಮಕ ಕಲಾವಿದರು, ವ್ಯಾಖ್ಯಾನಕಾರರು. ಇದು ಅವರಿಗೆ ತಂದೆಯಿಂದ ಬಂದ ಬಳುವಳಿ. ಜಯರಾಮರಾವ್ ಅವರ ತಂದೆ ಅನಂತ ಪದ್ಮನಾಭ ರಾಯರು ಹೆಸರಾಂತ ಗಮಕಿಯಾಗಿದ್ದರು. ತಮ್ಮ ತಂದೆಯ ಪರಂಪರೆಯನ್ನು ಗಮಕ ಗಾಯನದಲ್ಲಿ ಅವರು ಬಹು ಸಮರ್ಥವಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ. ಪಂಪಭಾರತ , ಗದಾಯುದ್ಧ, ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ ಹಾಗೂ ಇವುಗಳ ತೌಲನಿಕ ವಿವೇಚನೆ, ವ್ಯಾಖ್ಯಾನಗಳಲ್ಲಿ ರಾವ್ ಅವರದು ಎತ್ತಿದ ಕೈ.



ಪ್ರಾಚೀನ ಕನ್ನಡ ಕಾವ್ಯಗಳ ರಸಸ್ಥಾನಗಳನ್ನು ಒತ್ತಿ ಹಾಡುತ್ತಾ ಆ ಕೃತಿಗಳ ಹಿರಿಮೆ ಗರಿಮೆಗಳನ್ನು ಮನಂಬುಗುವಂತೆ ಅವರು ವಿವರಿಸಬಲ್ಲರು. ರಾವ್ ಅವರ ಕಂಠಸಿರಿಗೆ ಬೆರಗಾಗದವರಿಲ್ಲ. ಏಕಾಂಗಿಯಾಗಿ ಅವರು ಸಾವಿರಾರು ಗಮಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಸೈ ಎನಿಸಿಕೊಂಡಿದ್ದಾರೆ. ಕರ್ನಾಟಕದ ಮೂಲೆ ಮೂಲೆಗಳಿಗೆ ಹೋಗಿ ಅವರು ಕನ್ನಡ ಕಾವ್ಯ ಕೃತಿಗಳ ವಾಚನ, ವ್ಯಾಖ್ಯಾನಗಳ ಮೂಲಕ ಅಪಾರ ಅಭಿಮಾನಿಗಳ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ. ಅನೇಕ ಗಮಕ ಕಲಾ ಕಮ್ಮಟ, ಶಿಬಿರಗಳನ್ನು ಅವರು ನಡೆಸಿಕೊಟ್ಟಿದ್ದಾರೆ. ರಾವ್ ಅವರ ಗಮಕ ಕಾರ್ಯಕ್ರಮಗಳು ಮುಂಬೈ, ಮದ್ರಾಸ್, ಬರೋಡ, ಹಾಂಕಾಂಗ್ ಹೀಗೆ ದೇಶ, ವಿದೇಶಗಳಲ್ಲಿ ನಡೆದಿರುವುದು ವಿಶೇಷ. ಸರಳ ಸಜ್ಜನಿಕೆಗೆ ಹೆಸರಾಗಿರುವ ಅವರು ಬಹುಭಾಷಿಕ ಸಂವೇದನೆಯನ್ನು ಮೈಗೂಡಿಸಿಕೊಂಡಿದ್ದಾರೆ.

ಸ್ವತಃ ಒಳ್ಳೆಯ ಪತ್ರಕರ್ತರಾದ ಅವರು ಉತ್ತಮ ಲೇಖಕರೂ ಆಗಿದ್ದಾರೆ. ಕರ್ನಾಟಕದ ನಾಮಾಂಕಿತ ಕಥಾ ಕೀರ್ತನಕಾರರ, ಸಂಗೀತಗಾರರ, ಗಮಕ ಕಲಾ ದಿಗ್ಗಜರ ಕುರಿತು ಗಮಕಕಲೆಯ ಹುಟ್ಟು ಬೆಳವಣಿಗೆಯ ಬಗೆಗೆ ಜಯರಾಮ ರಾವ್ ಅವರು ಅನೇಕ ಮಹತ್ವದ ಲೇಖನಗಳನ್ನು ಬರೆದಿದ್ದಾರೆ. ಜಯರಾಮ ಅವರು ಪ್ರಾಚೀನ ಕನ್ನಡ, ಸಂಸ್ಕೃತ ಕಾವ್ಯಗಳನ್ನು ಚೆನ್ನಾಗಿ ಬಲ್ಲವರು. ಕರ್ನಾಟಕ ಕೀರ್ತನ ಕಲಾವಿದರು, ಗಮಕ ದಿಗ್ಗಜರು, ಕರ್ನಾಟಕದ ಹಿಂದೂಸ್ತಾನಿ ಕಲಾವಿದರು, ಬೆಂಗಳೂರು ನಾಗರತ್ನಮ್ಮ, ತೊರವೆ ರಾಮಾಯಣ ಸಂಗ್ರಹ ವ್ಯಾಖ್ಯಾನ ಮೊದಲಾದ ಮಹತ್ವದ ಕೃತಿಗಳನ್ನು ಅವರು ರಚಿಸಿದ್ದಾರೆ. ಅವರ ಗಮಕ ವ್ಯಾಖ್ಯಾನದ ಅನೇಕ ಸಿಡಿಗಳು ಬೆಳಕು ಕಂಡಿವೆ. ತಮ್ಮ ತಂದೆ ಅವರು ರಚಿಸಿದ್ದ ಕರ್ನಾಟಕ ಭಾರತ ಕಥಾಮಂಜರಿ ಹಾಗೂ ವಿಶ್ವಾಮಿತ್ರ ಚರಿತ್ರೆ ಎಂಬೆರಡು ಷಟ್ಪದಿ ಕಾವ್ಯ ಕೃತಿಗಳನ್ನು ಸೊಗಸಾಗಿ ಸಂಪಾದಿಸಿ ಕೊಟ್ಟಿರುವುದು ರಾವ್ ಅವರ ಪ್ರತಿಭೆಗೆ ಸಾಕ್ಷಿ. ಪಂಪ ಭಾರತ ಹಾಗೂ ಕುಮಾರವ್ಯಾಸ ಭಾರತಗಳ ತೌಲನಿಕ ಅಧ್ಯಯನ ನಡೆಸಿ ಪ್ರೌಢ ಪ್ರಬಂಧ ರಚಿಸಿರುವುದು ಅವರ ಪಾಂಡಿತ್ಯಕ್ಕೆ ಸಾಕ್ಷಿ. ಸ್ವತಃ ಕಲಾವಿದರಾಗಿ, ಕಲಾ ವಿಮರ್ಶಕರಾಗಿ, ಸಂಘಟಕರಾಗಿ ಕಾವ್ಯ ಪ್ರಚಾರಕರಾಗಿ ಪ್ರಸಾರಕರಾಗಿ ಜಯರಾಮರಾವ್ ಅವರು ಸ್ಮರಣೀಯವಾದ ಕಾರ್ಯವನ್ನುಗೈದಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ, ಕರ್ನಾಟಕ ಗಮಕ ಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಗಾನಕಲಾ ಸಿರಿಯ ಸಹ ಸಂಪಾದಕರಾಗಿ, ಮುಳಬಾಗಿಲು ಶ್ರೀ ಪುರಂದರ ದಾಸ ಆರಾಧನ ಟ್ರಸ್ಟ್ ಹೀಗೆ ಹತ್ತಾರು ಸಂಘ ಸಂಸ್ಥೆಗಳಲ್ಲಿ ಅವರು ಮಹತ್ವದ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ.

ಒಳ್ಳೆಯ ಗಮಕ ಕಲಾವಿದರೂ, ತಜ್ಞರೂ, ವಿದ್ವಾಂಸರೂ, ಸಂಗೀತ ವಿಮರ್ಶಕರೂ ಆಗಿರುವ ಜಯರಾಮ ರಾವ್ ಅವರಿಗೆ ಈಗ ೮೧ ರ ಹರೆಯ. ಗಮಕ ಲೋಕದಲ್ಲಿ ಅಪಾರವಾದ ಸಾಧನೆಗೈದ ಅವರಿಗೆ ಅನೇಕ ಮಾನ ಸಮ್ಮಾನಗಳು ದೊರಕಿವೆ. ಇತ್ತೀಚೆಗೆ ಪ್ರತಿಷ್ಠಿತ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ.

ಜಯರಾಮ ರಾವ್ ಅವರ ಗಮಕ ವಾಚನವೆಂದರೆ ಅದೊಂದು ಅಪೂರ್ವ ಅನುಭವ. ಗಮಕ ಸಾಧನೆಯಲ್ಲಿ ಅಪಾರ ಎತ್ತರ ಬಿತ್ತರಗಳನ್ನು ಕಂಡಿರುವ ಮಹಾನ್ ಸಾಧಕ ಎಂಬುದಾಗಿ ಹಿರಿಯ ವಿದ್ವಾಂಸರಾದ ಡಾ.ಅರಳುಮಲ್ಲಿಗೆ ಪಾರ್ಥಸಾರಥಿ ಅವರು ಕೊಂಡಾಡಿರುವುದರಲ್ಲಿ ತಥ್ಯವಿದೆ.

ಆರೂವರೆ ದಶಕಗಳಿಂದ ಗಮಕಕಲೆಯ ಆರಾಧನೆಯಲ್ಲಿ ನಿಷ್ಠೆಯಿಂದ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಜಯರಾಮ ರಾವ್ ಅವರು ಇತ್ತೀಚೆಗೆ ಸಾರ್ಥ-ಕತೆ ಎಂಬ ಆತ್ಮಕತೆಯನ್ನು ಬರೆದು ಪ್ರಕಟಿಸಿರುವುದು ಗಮನೀಯ ಸಂಗತಿ. ಇದು ಅವರ ಜೀವನಗಾಥೆಯಷ್ಟೇ ಆಗಿರದೇ ಸಾಂಸ್ಕೃತಿಕ ಕರ್ನಾಟಕದ ಸಂಕಥನವೂ ಆಗಿರುವುದು ವಿಶೇಷ. ಇಂಥ ಅಪ್ಪಟ ಸಾಧಕನನ್ನು ಸರಕಾರ, ಅಕಾಡೆಮಿ, ವಿವಿಗಳು ಗುರುತಿಸಿ ಗೌರವಿಸಲು ಇದು ಸಕಾಲ.

- ಡಾ.ಜಿ.ಎನ್. ಉಪಾಧ್ಯ
ಮುಖ್ಯಸ್ಥರು ಕನ್ನಡ ವಿಭಾಗ
ಮುಂಬೈ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬೈ-೯೮

# ನಾತಿ ಚರಾಮಿ

ಕೈಯ ಬೆರಳುಗಳಿಂದ ಕಣ್ಣಂಚಿನ ನೀರು ಒರೆಸಿಕೊಂಡ. ಎದುರಿಗೆ ಕುಳಿತಿದ್ದರು ಇಬ್ಬರೂ. ಆಕೆಗೆ ಯಾಕೊ ಮನದಲ್ಲಿ ತಳಮಳಮಳವಾಗತೊಡಗಿತು. ಹೇಗಿದ್ದ ವ್ಯಕ್ತಿ ಹೇಗಾಗಿದ್ದಾನೆ. ಯಾವಾಗಲೂ ಅತ ಶುಭ್ರ ವಸ್ತ್ರದಲ್ಲಿರುವಾತ. ಶ್ರೀಮಂತ ವ್ಯಾಪಾರಿ. ದಾನ ಧರ್ಮಗಳಿಗೆ ಎತ್ತಿದ ಕೈ. ಇದ್ದರೂ ಹೀಗಾಗಬೇಕೆ? ಬದುಕಿನಲ್ಲಿ ಯಾವುದು ಸ್ಥಿರವಾದುದು. ಆತ ಸಂಚಯಿಸಿಕೊಂಡ ಪುಣ್ಯ ಎಲ್ಲಿ ಹೋಯಿತು? ಮಾಡಿದ ದಾನವೆಲ್ಲ ವ್ಯರ್ಥವಾಯಿತೇ? ಆಕೆಯ ಮನದಲ್ಲಿ ವಿಚಾರಗಳು ಬರುತ್ತಲೆ ಇದ್ದವು. ಆಗುವುದನ್ನು ಯಾರಿಗೆ ತಡೆಯಲು ಸಾಧ್ಯ.

ವಿಸ್ತಾರದ ಪಲ್ಲಂಗ, ಅದರ ಮೇಲೆ ಶುಭ್ರವಾದ ಹಾಸಿಗೆ, ಕೈ ಕಸೂತಿ ಮಾಡಿದ ಹೊದಿಕೆ, ಎತ್ತಿ ಕಟ್ಟಿದ ಸೊಳ್ಳೆ ಪರದೆ, ಆಕರ್ಷಕ ಹೊದಿಕೆಯಲ್ಲಿರುವ ತಲೆದಿಂಬು. ವಿಸ್ತಾರವಾದ ಪಲ್ಲಂಗದ ಮೇಲೆ ಕುಳಿತುಕೊಂಡಾತ ಒಬ್ಬನೆ. ಎಡಗಡೆಗೆ ಇರುವ ಕಿಟಕಿಯಿಂದ ಬರುತ್ತಿರುವ ತಂಗಾಳಿ. ವಿಶ್ರಾಂತ ಜೀವನಕ್ಕೆ ಇಷ್ಟು ಸಾಕಲ್ಲವೆ.

ಆದರದು ವಿಶ್ರಾಂತವಾಗಿರಲಿಲ್ಲ. ಎರಡು ತಿಂಗಳ ಹಿಂದೆ ಪಾರ್ಶ್ವ ರೋಗಕ್ಕೆ ತುತ್ತಾಗಿದ್ದನಾತ. ಬಲಭಾಗ ಪ್ರ್ಣವಾಗಿ ನಿಷ್ಕ್ರೀಯವಾಗಿತ್ತು. ಮಾತುಗಳಿಗೆ ಧ್ವನಿ ಬರದಾಗಿತ್ತು. ಏನಾದರೂ ಹೇಳಬೇಕೆನಿಸಿದರೆ ಆಂ, ಊಂ. ಇಷ್ಟೆ ಸಾಧ್ಯವಾಗುತ್ತಿತ್ತು. ಈ ಧ್ವನಿ ಕೇವಲ ಹೆಂಡತಿಗೆ ಅರ್ಥವಾಗುತ್ತಿತ್ತೇನೊ. ಕ್ಷಣಕ್ಕೊಮ್ಮೆ ಕಣ್ಣಿಂದ ನೀರು ಬರುತ್ತಿತ್ತು. ಅಸಹಾಯಕತೆ. ಆತ ಕುಳಿತಿದ್ದ. ಅವನೆದುರಿಗೆ ಅವರಿಬ್ಬರು ಗಂಡ ಹೆಂಡತಿ. ಈತ ವ್ಯಾಪಾರಿ, ಅವರು ನೌಕರಿ ಮಾಡುವವರು. ಸ್ನೇಹಕ್ಕೆ ಸಾಮಾಜಿಕ ಅಂತಸ್ತು ಅಡ್ಡ ಬಂದಿರಲಿಲ್ಲ. ಆತನಿಗೆ ಅನಾರೋಗ್ಯವೆಂದು ಭೇಟಿಯಾಗಲು ಬಂದಿದ್ದರು.

ಆತ ಕ್ಷಣಕ್ಕೊಮ್ಮೆ ಕೈಯತ್ತಿ ಆಂ ಊ ಎನ್ನುತ್ತ ಸ್ವರ ತೆಗೆಯುತ್ತಿದ್ದ. ಕಣ್ಣಿಂದ ನೀರು ಒರಸುತಿದ್ದ. ಇಬ್ಬರೂ ಆತನಿಗೆ ಸಾಂತ್ವನ ಹೇಳುತ್ತಲೇ ಇದ್ದರು. ಅತನ ಹೃದಯದ ಭಾಷೆ ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರಿಗೆ ತಿಳಿಯುತ್ತಿದ್ದುದು ಸಧ್ಯಕ್ಕೆ ಅಗತ್ಯವಿದ್ದ ಔಪಚಾರಿಕತೆಯ ಅವಶ್ಯಕತೆ ಮಾತ್ರ. ಕುರ್ಚಿಯಲ್ಲಿ ಕುಳಿತುಕೊಂಡ ಹೆಂಡತಿ ನೊಂದುಕೊಳ್ಳುತ್ತಾ, ಮರುಕಪಡುತ್ತಾ ಹೇಳಿದಳು.'ಧೈರ್ಯ ತೆಗೆದುಕೊಳ್ಳಿ ದೇವರಿದ್ದಾನೆ.' ಅತೀ ಮೆಲ್ಲಗೆ ಹೇಳಿದ ಗಂಡ 'ಹಾಗೆನ್ನ ಬೇಡ, ಅವರಿಗೆ ಮತ್ತಷ್ಟು ದುಃಖವಾಗುತ್ತದೆ, ಎಲ್ಲ ಒಳ್ಳೆಯದಾಗುತ್ತೆ ಅಂತ ಹೇಳು'.ಆಕೆ ಸುಮ್ಮನಾದಳು. ಪುನಃ ಅವನನ್ನು ನೋಡಿದಳು. ಕಣ್ಣಂಚಿನ ನೀರನ್ನು ಒರೆಸಿದ. ಶುಭ್ರವಾದ ಉಡುಪಿನಲ್ಲಿದ್ದ. ಆದರೆ ದಾಡಿ ಬೆಳೆದಿದ್ದವು, ಮುಖದಲ್ಲಿ ಗೆಲುವಿರಲಿಲ್ಲ. ಕೆಂಪಗೆ ಆದ ಕಣ್ಣುಗಳು ಅವನ ದುಃಖವನ್ನು ಪ್ರತಿಬಿಂಬಿಸುತ್ತಿದ್ದವು. ಮನವನ್ನು ತುಂಬಿದ ದುಃಖವನ್ನು ವ್ಯಕ್ತಪಡಿಸಲಿಕ್ಕಾಗದೇ ಆತ ಎಡಗೈಯನ್ನೆತ್ತಿ ಹಾಂ ಹಾಂ ಎನ್ನುತ್ತ ಪ್ರಶ್ನೆ ಹಾಕುವಂತೆ ಕೈ ತಿರುಗಿಸಿದ. ಆಕೆಗೇನೂ ತಿಳಿಯಲಿಲ್ಲ. ಕುರ್ಚಿಯಲ್ಲಿದ್ದಾತ ಹೇಳಿದ, 'ಏನೂ ಆಗಿಲ್ಲ ಎಲ್ಲ ಸರಿ ಹೋಗುತ್ತದೆ, ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸಲಹೆ ಮತ್ತು ಉಪಚಾರ ಸಿಕ್ಕಿದುದರಿಂದ ಏನೂ ಸಮಸ್ಯೆ ಇಲ್ಲ, ನೀವು ನಗು ನಗುತ್ತಾ ಇರಬೇಕು, ಧೈರ್ಯವಾಗಿರಬೇಕು, ಸ್ವಲ್ಪ ಸಮಯ ಹಿಡಿದೀತು ಆದರೆ ಎಲ್ಲವೂ ಸರಿಯಾಗುತ್ತದೆ.' ಅವನನ್ನು ಆ ಸ್ಥಿತಿಯಲ್ಲಿ ನೋಡುತ್ತಿರುವಾಗ ಆಕೆಗೆ ತಳಮಳವೆನಿಸುತ್ತಿತ್ತು. ಆತನ ಹೆಂಡತಿ ಹೊರಗೆ ಯಾರೊಂದಿಗೊ ಮಾತಾಡುತ್ತಿದ್ದಳು. ಅವರೂ ಈತನ ಭೇಟಗೇ ಬಂದಿದ್ದರು. ಅನಾರೋಗ್ಯವಾದಾಗ ಎಲ್ಲರೂ ಬರುವವರೆ. ನೋವನ್ನು ಯಾರೂ ತೆಗೆದುಕೊಳ್ಳುವದಿಲ್ಲ ಆದರೆ ಬರದಿದ್ದರೆ ಹೇಗೆ, ಕೆಲವರು ಮರುಕ ತೋರಿಸಿದರೆ ಕೆಲವರು ಗಾಯವನ್ನು ಹಿಂಡಿದ ತರ ಮಾತಾಡುವವರು, ಇನ್ನು ಕೆಲವರು ಅನುಕಂಪ ತೋರುವವರು. ಭಿನ್ನ ಭಿನ್ನ ಪ್ರಕೃತಿಯವರು. ರೋಗಿ ಏನು ಬಯಸುತ್ತಾನೆ ಎನ್ನುವುದನ್ನೆ ಅವರು ನೋಡರು.

ಬರುಹೋಗುವವರ ಸಂಖ್ಯೆ ಏನೂ ಕಡಿಮೆ ಇರಲಿಲ್ಲ. ಬಂದವರೊಂದಿಗೆ ನಾಲ್ಕು ಮಾತನ್ನಾಡಿ, ಅವರು ಹೊರಹೋಗುವಾಗ ಬಾಗಿಲವರೆಗೆ ಹೋಗಿ ಅವರನ್ನು ಕಳಿಸಿ ಒಳಬರುತ್ತಲೆ ಮತ್ತಾರೊ ಬರುತ್ತಿದ್ದರು.ಗಂಡನ ಜೊತೆಗೆ ಕುಳಿತು ಮಾತಾಡಲು ಆಕೆಗೆ ಸಮಯವೆ ಇರಲಿಲ್ಲ, ಅಥವಾ. . . .ಆತನಿಗೆ ಮಾತಾಡಲು ಸಾಧ್ಯವೂ ಇಲ್ಲ. ಪಾರ್ಶ್ವವಾಯು ಆ ಬಲವನ್ನು ಕಿತ್ತುಕೊಂಡಿತ್ತು. ಎದ್ದು ಹೋಗಲೂ ಸಾಧ್ಯವಿಲ್ಲ. ಸಂಗಾತಿ ಬಂದು ತನ್ನ ಪಕ್ಕದಲ್ಲಿ ಕುಳಿತುಕೋಳ್ಳಬೇಕೆಂಬ ಇಚ್ಛೆಯಿದ್ದಿರಬಹುದೆ, ಹೇಗೆ ವ್ಯಕ್ತಪಡಿಸಿಯಾನು. ಸಧ್ಯಕ್ಕೆ ಆತ ಆ ಕೊಠಡಿಯಲ್ಲಿ ಬಂಧಿತ.

ಯಾರು ಬಂದಿಗಳಿಲ್ಲ. ನಮ್ಮ ನಮ್ಮ ವಿಚಾರಗಳ ಸುರುಳಿಯಲ್ಲಿ/ಚಕ್ರದಲ್ಲಿ ಸುತ್ತಿಕೊಂಡು ಬಂದಿಯಾಗಿರುವದಿಲ್ಲವೆ. ಜ್ಞಾನಿಗಳು ಅದಕ್ಕೇ ಹೇಳಿರಬಹುದೆ ಸಂಸಾರವನ್ನು ಭವರೋಗವೆಂದು. ಆಕಸ್ಮಿಕ ಆತನ ಹೆಂಡತಿ ಒಳಬಂದಳು. ಆತ ಕೈ ಎತ್ತಿ ಧ್ವನಿ ತೆಗೆದ. 'ಏನನ್ನೊ ಹೇಳಬಯಸುತ್ತಿರಬಹುದು ಪೆನ್ನು ಕೊಡಿ ಬರೆದು ತೋರಿಸಲಿ.' ಕುರ್ಚಿಯಲ್ಲಿದ್ದಾತ ಹೇಳಿದ.

'ಎಡಗೈಯಿಂದ ಬರೆಯುವ ರೂಢಿ ಇಲ್ಲ'.ನಿರ್ವಿಕಾರವಾಗಿ ಉತ್ತರಿಸಿದಳು. ಆತ ಕೈ ಕೆಳಗೆ ಮಾಡಿದ. ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡಿತು.ಸ್ವಲ್ಪು ಹೊತ್ತು ಎಣ್ಣೆಯಿಂದ ಆತನ ಕೈ ಕಾಲುಗಳನ್ನು ತಿಕ್ಕಿದಳು. ಪುನಃ ಹೊರ ಹೋದಳು ಯಾವುದೊ ನಿಮಿತ್ಯಕ್ಕೆ. ಆತ ತಲೆ ತಗ್ಗಿಸಿದ. ಆಕೆಗೆ ಬೇಸರವಾಗಿರಬಹುದೆ, ಎರಡು ತಿಂಗಳ ಮೇಲಾಯಿತಲ್ಲ. ಹೆಂಡತಿ ಎದುರಿಗೆ ಇದ್ದರೆ ಎಂಟಾನೆಯ ಬಲ. ಈ ನೋವನ್ನು ಝಾಡಿಸಿ ಒಗೆಯಬಹುದಿತ್ತು. ಅಥವಾ ಆಕೆ ಆತನ ಹಾಂ ಹಾಂ ಎನ್ನುವ ಭಾವವನ್ನು ಅರ್ಥಮಾಡಿಕೊಳ್ಳಬಹುದಿತ್ತೇನೊ. ಅವಳಿಗೆಲ್ಲಿದೆ ಸಮಯ.

ಹೀಗಾಗುವುದಕ್ಕೆ ಮೊದಲು, ಆತ ಯಾವಾಗಲೂ ದೇವರ ನಾಮವನ್ನು ಪಠಿಸುತ್ತಾ ಇರುವ ಜನ. ಒಂದು ಕ್ಷಣವೂ ವ್ಯರ್ಥವಾಗಿ ಕಳೆದವನಲ್ಲ. ವ್ಯವಹಾರ ಅಥವಾ ಮಂತ್ರ ಪಠಣ. ಮಂತ್ರ ಅಂದರೆ ಒಂದು ನೋಟ್ ಬುಕ್ಕಿನಲ್ಲಿ ರಾಮನಾಮವನ್ನು ಬರೆಯುತ್ತಿದ್ದುದು.

ಒಳಗೆ ಹೊರಗೆ ಓಡಾಡುತ್ತಾ ಎಲ್ಲರೊಂದಿಗೆ ಮಾತಾಡುತ್ತ, ಮುಖದಲ್ಲಿ ಅಸಮಾಧಾನವೊ ದುಃಖವೊ ತಿಳಿಯದಂತಹ ಭಾವ ಹೊತ್ತುಕೊಂಡು ಹೋಗುವವರನ್ನು ಬೀಳ್ಕೊಡುತ್ತಾ ಬರುವವರನ್ನು ಸ್ವಾಗತಿಸುತ್ತಾ ಇದ್ದಳಾಕೆ. ಕೆಲವೇ ತಿಂಗಳುಗಳ ಹಿಂದೆ ಮಗಳ ಮದುವೆಯ ಸಮಾರಂಭದಲ್ಲಿ ಅತ್ಯಂತ ಸುಂದರವಾಗಿ ಅಲಂಕರಿಸಿಕೊಂಡು ಇಬ್ಬರೂ ಒಟ್ಟೊಟ್ಟಿಗೆ ಎಲ್ಲರನ್ನು ಸ್ವಾಗತಿಸುತ್ತ ಕೈಕುಲುಕುತ್ತಿದ್ದರೆ, ಅನೇಕ ಸ್ನೇಹಿತರು ಹಾಸ್ಯ ಮಾಡಿದ್ದರು, 'ಮದುವೆ ಯಾರಿಗೆ?' 'ಮಗಳಿಗೇ'. ನಗುಮುಖದಿಂದ ಉತ್ತರಿಸಿದ್ದರು ಇಬ್ಬರೂ.

ಈಗಾಕೆ ಇಬ್ಬರನ್ನೂ ನೋಡಿ ನೆನಪಿಸಿಕೊಂಡಳು. ಅಜಗಜಾಂತರ. ಒಬ್ಬರು ಹಾಸಿಗೆಯ ಮೇಲೆ ಬಂದಿಯಂತೆ. ಕೆದರಿದ ತಲೆ, ಬೆಳೆದ ಗಡ್ಡ ಮೀಸೆ, ಯಾವಾಗಲೂ ತುಳುಕಲು ಸಿದ್ಧವಾದ ಕಣ್ಣಬಿಂದು, ದುಃಖಪೂರಿತ ಮುಖ, ಅಸಹಾಯಕ ನೋಟ ಮತ್ತು ವಿಶ್ವಾಸ ಕುಸಿಯುತ್ತಿರುವದಕ್ಕೆ ಸಾಕ್ಷಿಯಾಗಿರುವ ಕೃಷವಾದ ಶರೀರ. ತೀರ ಪರಿಚಿತರು ಬಂದರೆ ಹಾಂ ಹಾಂ ಎಂದು ಪ್ರಶ್ನೆ ಕೇಳುವಂತೆ

✍ ದಾಕ್ಷಾಯಿಣಿ ಯಡಹಳ್ಳಿ

ಕೈ ಎತ್ತುವ ಭಂಗಿ. ಈಕೆ ಒಪ್ಪವಾಗಿ ತಲೆಬಾಚಿ, ಹಣೆಗೆ ಕುಂಕುಮವಿಟ್ಟು, ಒಳ್ಳೆ ಸೀರೆಯನುಟ್ಟು ಒಳಹೊರಗೆ ಓಡಾಡುತ್ತ, ಕೆಲವರೊಂದಿಗೆ ನಗುತ್ತಾ ದುಃಖದ ಪ್ರದರ್ಶನ ಮಾಡುತ್ತಾ ಅಥವಾ ನಿರ್ಲಿಪ್ತತೆಯೊ.....

ಕುರ್ಚಿಯಲ್ಲಿ ಕುಳಿತವಳಿಗೆ ಇದನ್ನು ನೋಡಲಾಗಲಿಲ್ಲ. 'ಇನ್ನು ಹೋಗೋಣವೆ?' ಕೇಳಿದಳು. ಎದ್ದು ನಿಂತು ಆತ ಅವನ ಎಡಗೈ ಕುಲುಕಿದ ಹೇಳಿದ. 'ದುಃಖ ಮಾಡಿಕೊಳ್ಳಬೇಡಿ, ಗಟ್ಟಿಮನಸ್ಸು ಮಾಡಿ, ಮತ್ತೆ ಬರುತ್ತೇವೆ, ಆಗ ಚೆನ್ನಾಗಿ ಮಾತಾಡೋಣ, ಬೇಗನೇ ಮಾತಾಡುವಂತಾಗಿ.' ಕೆಂಪಾದ ಕಣ್ಣಿಂದಲೇ ತಲೆಯಾಡಿಸಿದ ನಾತ.

ಇಬ್ಬರೂ ಹೊರಬಂದರು. ಹೊರಗೆ ನಿಂತಿದ್ದ ಆತನ ಹೆಂಡತಿಗೆ ಹೇಳಿದರು ನಾವಿನ್ನು ಬರುತ್ತೇವೆ. ತಲೆಯಾಡಿಸುತ್ತ ಆಕೆ ಅವನಿದ್ದ ಕೊಠಡಿಯೊಳಗೆ ಹೋದಳು. ಈಕೆ ನೆನಪಿಸಿಕೊಳ್ಳತೊಡಗಿದಳು. ಮನಸ್ಸೇಕೊ ಭಾರವೆನಿಸತೊಡಗಿತ್ತು. ಕಾಲಲ್ಲಿ ಸೀರೆ ತೊಡಕಿದಂತಾಗಿ ಹೆಜ್ಜೆ ತಡವರಿಸಿತು. ಸಾವರಿಸಿಕೊಳ್ಳತೊಡಗಿದಾಗ ಒಳಗಿನಿಂದ ಮಾತುಗಳು ಕೇಳಿಸತೊಡಗಿದವು. 'ಯಾಕೆ ನೀವು ಬಂದವರ ಮುಂದೆ ಅಳುತ್ತಾ ಕೂಡುತ್ತೀರಿ? ನಿಮ್ಮ ಉಪಚಾರಕ್ಕೆ ಏನು ಕಡಿಮೆಯಾಗಿದೆ,... 'ಮುಂದೆ ಏನು ಹೇಳುತ್ತಿದ್ದಳು ಅದನ್ನು ಕೇಳಲಾಗಲಿಲ್ಲ. ಎದುರಿನಿಂದ ಯಾರೊ ಬಂದಂತಾಗಲು ಆಕೆ ಪಾವಟಿಗೆಗಳನ್ನು ಇಳಿಯತೊಡಗಿದಳು. ಗಂಡ ಆಗಲೇ ಇಳಿದುಹೋಗಿದ್ದ. ಉಪಚಾರಕ್ಕೆ ಏನೂ ಕಡಿಮೆ ಇರಲಿಲ್ಲ. ಆದರೆ ಅಲ್ಲಿ ಭಾವನೆಗಳಿದ್ದವೆ, ಆಸ್ಪತ್ರೆಯ ದಾಯಿ ಇದಕ್ಕಿಂತ ಚೆನ್ನಾಗಿ ಉಪಚರಿಸಬಲ್ಲಳು. ದಾಯಿ ಮಾಡುವದು ಹಣಕ್ಕಾಗಿ, ಆದರೆ ಇಲ್ಲಿ?. ಹಣಕ್ಕೇನೂ ಕೊರತೆಯಿರಲಿಲ್ಲ. ಆದರೆ ಏನೋ ಕೊರತೆ ಎನಿಸುತ್ತದೆ. ಸುಖವನ್ನು ಹಂಚಿಕೊಳ್ಳುವಾಗ ಅದೆಷ್ಟು ಸಂತಸದಲ್ಲಿ ಇದ್ದಳಾಕೆ, ದುಃಖದ ಈ ಸಮಯದಲ್ಲಿ ಅದು ಎಲ್ಲಿ ಹೋಯಿತು ಯಾಕೆ? ಗಂಡನಿಗೆ ತನ್ನ ಸಹಾಚರ್ಯ ಬೇಕೆಂದು ಅವಳಿಗೇಕೆ ಅನಿಸುತ್ತಿಲ್ಲವೊ, ಅವಳ ಒಳ್ಳೆಯತನ ಕಾಣಿಸದಾಗಿತ್ತು.

ತೀರ ಯಾಂತ್ರಿಕವಾದ ಆ ಉಪಚಾರ, ಅದೆಷ್ಟು ಪರಿಣಾಮ ಬೀರೀತು? ಸಂಸಾರದಲ್ಲಿ ಸುಖ ಮಾತ್ರ ಬೇಕೆ. ನೆನಪಿಸಿಕೊಳ್ಳತೊಡಗಿದಳು. ಇಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿ ಕೊಂಡಿದ್ದಾರೆಯೇ?. ಧರ್ಮೆಚ ಅರ್ಥೇಚ........ ನಾತಿ ಚರಾಮಿ. ಅಥವಾ ಪತ್ನಿ ಅರ್ಥಮಾಡಿಕೊಂಡು..... ದೀರ್ಘವಾಗಿ ಉಸಿರು ಹಾಕಿದಳು. ಮನುಷ್ಯ ತನ್ನ ನೋವನ್ನು ತಾನೇ ಅನುಭವಿಸಬೇಕು ಗಂಡನೊ ಹೆಂಡತಿಯೊ 'ಯಾರಿಗೆ ಯಾರುಂಟು ಎರವಿನ ಸಂಸಾರ', ದಾಸರ ನುಡಿ ಎಷ್ಟು ಸತ್ಯವಾದುದು. ಆತನ ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ಆಕೆಗೆ ಬಹಳ ಕೆಡುಕೆನಿಸಿತು.

# ಒಂಟಿ ಕೈ ಚಪ್ಪಾಳೆ !

ಇದೆಂತಹಾ ವಿಚಿತ್ರ ಶೀರ್ಷಿಕೆಯಪ್ಪಾ ! ಒಂಟಿ ಕೈ ನಿಂದ ಚಪ್ಪಾಳೆ ಸಾಧ್ಯವೇ ? ಈ ವಿಚಿತ್ರವನ್ನು ನೀವೆಲ್ಲದರೂ ಕಂಡಿದ್ದೀರಾ ! ಕೇಳಿದ್ದೀರಾ ? ಎಂಬ ಅಚ್ಚರಿ ಓದುಗರಿಗೆ ಆಗುವುದು ಸಹಜವೇ. ಆದರೆ ಕೆಲವೊಮ್ಮೆ ವಿಚಿತ್ರಗಳು ಸಂಭವಿಸುವುದುಂಟು ಎಂಬ ಸತ್ಯ ನಿಮ್ಮ ಗಮನಕ್ಕೂ ಬಂದಿರಬಹುದಲ್ಲವೇ ! ನಂಬಲು ಕಷ್ಟವೆನಿಸಿದರೂ ಇದು ವಾಸ್ತವ ಎನಿಸಿದ, ನಾ ಓದಿದ ಆ ಘಟನೆ ಹೀಗಿದೆ :

ಜಾಗತಿಕ ಮಹಾ ಯುದ್ಧದಲ್ಲಿ ಗೆಲುವು ಸಾಧಿಸಿದ ಅಮೇರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ವಿಜಯೋತ್ಸವ ಆಚರಿಸಿತ್ತು. ಇದರ ಅಂಗವಾಗಿ ಯುದ್ಧದಲ್ಲಿ ಭಾಗವಹಿಸಿದ್ದ ಎಲ್ಲ ಯೋಧರನ್ನೂ ಸನ್ಮಾನಿಸಿ, ರಂಜಿಸಲು ಒಂದೆಡೆ ಸೇರಿಸಿ ಅವರಿಗಾಗಿ ಒಂದು ಕಾರ್ಯ ಕ್ರಮವನ್ನು ಅಮೇರಿಕಾದ ಹಲವು ಸಂಘಟನೆಗಳ ಮುಖ್ಯಸ್ತರು ಒಗ್ಗಟ್ಟಾಗಿ ಏರ್ಪಡಿಸಿದ್ದರು. ಕೆಲವೇ ಕಾಲದ ಹಿಂದಷ್ಟೇ ಯುದ್ಧದಲ್ಲಿ 'ಮಾಡು ಅಥವಾ ಮಡಿ' ಎಂದು ವೀರಾವೇಶದಿಂದ ಶತ್ರುಗಳ ಜೊತೆ ಕಾದಾಡಿ ನೊಂದು ಬೆಂದಿದ್ದ ಯೋಧರ ಮುಖದಲ್ಲಿ ಮತ್ತೆ ನಗೆ ಮೂಡಿಸಲು ಅಂದಿನ ಕಾರ್ಯಕ್ರಮಕ್ಕೆ ಸುಪ್ರಸಿದ್ಧ ಹಾಸ್ಯಗಾರನಾದ ಜಿಮ್ಮಿ ಡುರಂಟೆಯನ್ನು ಆಹ್ವಾನಿಸಲಾಗಿತ್ತು.

ಆದರೆ ಈತ ಅಂದೇ ಬೇರೊಂದು ಕಡೆ ಕಾರ್ಯಕ್ರಮ ನೀಡಲು ಮಾತಾಗಿದ್ದರೂ ಯೋಧರನ್ನು ನಿರಾಸೆಗೊಳಿಸಬಾರದು ಎನಿಸಿ, ತಾನು

ಕೇವಲ ಕೆಲವೇ ನಿಮಿಷಗಳು ಮಾತ್ರ ಕಾಯಕ್ರಮ ನಡೆಸಲು ಒಪ್ಪಿ ಮುಂದಾದನು. ಈತನ ಹಾಸ್ಯ ಸವಿದು ನಲಿಯಲು ಪ್ರವಾಹದೋಪಾದಿಯಲ್ಲಿ ನೆರೆದಿದ್ದ ಜನರು, ಡುರಂಟೆಯ ಒಂದೊಂದು ಹಾಸ್ಯ ಚಟಾಕಿಯನ್ನೂ ಮುಕ್ತ ಮನಸ್ಸಿನಿಂದ ಸವಿದು ತಮ್ಮ ಹರ್ಷವನ್ನು ಕಿವಿಗಪ್ಪಳಿಸುವ ಚಪ್ಪಾಳೆಯಿಂದ ವ್ಯಕ್ತಪಡಿಸಲಾರಂಬಿಸಿದರು. ಈ ಸಭಿಕರ ಹರ್ಷೋದ್ಗಾರದಿಂದ ಪ್ರೇರಿತನಾದ ಡುರಂಟೆ. ಅಲ್ಲಿ ತನ್ನ ಕಾಯಕ್ರಮ ಕೇವಲ ಕೆಲವೇ ನಿಮಿಷಗಳು ಮಾತ್ರ ಎಂದಿದ್ದ ತನ್ನ ಮಾತನ್ನು ತಾನೇ ಮರೆತು ಎರಡು ಗಂಟೆಗಳ ಕಾಲ ಮಾತನಾಡಿ, ಜನರ ಸಂತಸ, ನಲಿವಿನಲ್ಲಿ ತಾನೂ ಪಾಲ್ಗೊಂಡನು. ತಾನೇ ನಿಗದಿಪಡಿಸಿದ ಕಾಲಕ್ಕಿಂತಾ ಹೆಚ್ಚಿನ ಅವಧಿಗೆ ಕಾರ್ಯಕ್ರಮ ನಡೆಸಿಕೊಟ್ಟ ಡುರಂಟೆಗೆ ಧನ್ಯವಾದಗಳನ್ನು ಅರ್ಪಿಸಿದ ಸಂದರ್ಭದಲ್ಲಿ, ಉತ್ತರಿಸಿದ ಡುರಂಟೆ, ನಾನು ಯಾವಾಗಲೂ ಸಮಯಪಾಲನೆಗೆ ಮಹತ್ವ ಕೊಡುವವನು. ಇಂದೂ ಕೇವಲ ಕೆಲವೇ ನಿಮಿಷಗಳು ಮಾತನಾಡಲು ಇಲ್ಲಿಗೆ ಬಂದಿದ್ದೆ. ಆದರೂ ಅದಕ್ಕಿಂತಾ ಹೆಚ್ಚಿನ ಕಾಲ ಮಾತನಾಡಲು ಕಾರಣ ಸಭೆಯ ಮೊದಲ ಸಾಲಿನಲ್ಲಿ ಕುಳಿತಿದ್ದ ಇಬ್ಬರು ಯೋಧರು. ಅವರಲ್ಲಿ ಒಬ್ಬ ಬಲಗೈ ಮತ್ತೊಬ್ಬ ಎಡಗೈ ಕೈ ಕಳೆದುಕೊಂಡ. ಆದರೂ ನನ್ನ ಹಾಸ್ಯ ಮೆಚ್ಚಿ ತಮಗಾದ ಸಂತಸವನ್ನು ಚಪ್ಪಾಳೆಯಿಂದ ವ್ಯಕ್ತಪಡಿಸಲು ತಮಗೆ ಎರಡು ಕೈಗಳಿಲ್ಲವಲ್ಲಾ ! ಎಂದು ಅವರು ಕೊರಗಲಿಲ್ಲ. ಬದಲಿಗೆ, ಒಬ್ಬನ ಎಡ ಕೈ, ಮತ್ತೊಬ್ಬನ ಬಲ ಕೈ ಜೊತೆ ಸೇರಿಸಿ, ಚಪ್ಪಾಳೆ ಬಾರಿಸಿ, ತಮಗಾದ ಆನಂದವನ್ನು ಸೂಚಿಸಿದರು. ಅವರ ಆ ಚಪ್ಪಾಳೆ ನನಗೆ ಮತ್ತಷ್ಟು ಮಾತನಾಡಲು ಪ್ರೇರಣೆ ನೀಡಿತು. ಅವರ ಆ ಕ್ರಿಯೆಯೇ ಈ ಸಭೆ ನನಗಿತ್ತ ಬಹುಮಾನವಾಯಿತು. ಕಾರ್ಯಕ್ರಮ ನಿಗಧಿತ ಕಾಲಕ್ಕಿಂತಾ ಹೆಚ್ಚಿಗೆ ನಾ ಮುಂದುವರಿಸಲು ಈ ಅಪರೂಪದ ಪ್ರಕ್ರಿಯೆಯೇ ನನಗೆ ಪ್ರೇರಣೆಯಾಯಿತು ಎಂದ ಡುರಂಟೆ,

"ನನ್ನೊಬ್ಬನಿಂದ ಏನಾದೀತು' ! ಒಂದು ಕೈ ಚಪ್ಪಳೆ ಎಂದೂ ಸಾಧ್ಯವಾಗದು" ಮೊದಲಾದ ಬಳಕೆಯಲ್ಲಿರುವ ಮಾತುಗಳನ್ನು ಆ ಯೋಧರು ಸುಳ್ಳು ಎನಿಸಿದರು. 'ಒಗ್ಗಟ್ಟಿನಿಂದ ಬಲ, ಛಲವೇ ಬಲ, ಇಚ್ಛಾಶಕ್ತಿಯಿದ್ದರೆ ಏನನ್ನಾದರೂ ಸಾಧಿಸಬಹುದು, ಒಂಟಿ ಕೈನಿಂದಲೂ ಚಪ್ಪಾಳೆ ಸಾಧ್ಯ' ಎಂಬ ವಾಸ್ತವವನ್ನು ತಮ್ಮ ನಡೆಯಿಂದ ಸಮರ್ಥಿಸಿದರು, ಆ ಯೋಧರು. "ನಾನೊಬ್ಬನೇ ಏನು ಮಾಡಬಲ್ಲೆ ! ನನ್ನೊಬ್ಬನಿಂದ ಏನಾಗುತ್ತದೆ, ತನ್ನಿಂದೇನೂ ಆಗದು, ತಾನು ಕೆಲಸಕ್ಕೆ ಬಾರದವನು, ಅಪ್ರಯೋಜಕ"ಎಂಬ ಭಾವನೆಗಳಿಗೆ, ನಮ್ಮಲ್ಲಿನ ಕೀಳರಿಮೆ, ನಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ಆತ್ಮವಿಶ್ವಾಸದ ಕೊರತೆಯೇ ಮೂಲ ಕಾರಣ ಎಂದಿದ್ದಾರೆ ಅನುಭವಿಗಳು. ಇದರಿಂದ ವ್ಯಕ್ತಿಗಳಲ್ಲಿ ತಮ್ಮನ್ನು ತಾವೇ ದ್ವೇಷಿಸಿಕೊಳ್ಳುವ ಪ್ರವೃತ್ತಿಯುಂಟಾಗುತ್ತದೆ. ಇದು ವ್ಯಕ್ತಿಯ ಪರಿಪೂರ್ಣ ಬೆಳವಣಿಗೆಗೆ ದೊಡ್ಡ ಆಘಾತವಾಗುತ್ತದೆ. ಹಲವಾರು ಸೌಲಭ್ಯಗಳಿಂದ ವಂಚಿತರಾದ ಜನರು ಮೇಲೇಳಲು, ಅಗತ್ಯವಾದ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಅಡ್ಡಗೋಡೆಯಾಗಿ ಈ ಕೀಳರಿಮೆ ನಿಂತು, ಅಸಹಾಯಕ ಸ್ಥಿತಿಯಲ್ಲಿ ಇರುವ ಜನರಲ್ಲಿ ನಿಷೇದಾತ್ಮಕ ಭಾವನೆಗಳನ್ನು ತುಂಬಿ ಅವರ ಬದುಕಿಗೆ ಅಪ್ರತ್ಯಕ್ಷವಾಗಿ ಕೆಡುಕನ್ನುಂಟುಮಾಡುವ ಅಕಾರ್ಯವನ್ನು ಮಾಡುತ್ತದೆ.

ಇದಕ್ಕೆ ಪರಿಹಾರವೇನು ಎಂದಿರಾ ! ಹಿರಿಯರು, ವಿದ್ಯಾವಂತರೆನಿಸಿಕೊಂಡವರು ಬಾಲ್ಯದಿಂದಲೇ ಮಕ್ಕಳಲ್ಲಿ ವ್ಯಕ್ತಿ ಗೌರವದ ಸದ್ಭಾವನೆ ಯನ್ನು ಬೋಧನೆಯ ಜೊತೆಗೆ, ತಮ್ಮ ವರ್ತನೆಗಳ ಮೂಲಕ ತಿಳಿಸಿಕೊಡಬೇಕು. ತಾವು ಕೆಳಗಿದ್ದೇವೆಂಬ ಕೀಳರಿಮೆ ಹೊಂದಿರುವವರಲ್ಲಿ ಇರುವ ನಿಷೇದಾತ್ಮಕ ಭಾವನೆಗಳನ್ನು ಹೊರತಳ್ಳಿ, ಅವರಲ್ಲಿ ಆತ್ಮ ವಿಶ್ವಾಸದ ಭಾವನೆಯ ಬೀಜಗಳನ್ನು ಬಿತ್ತಲು ಶ್ರಮಿಸಬೇಕು. ಹೊರಗಿನವರು ಮಾಡುವ ಪ್ರಯತ್ನದ ಜೊತೆಗೆ, ಈ ಕೀಳರಿಮೆಗೆ ಗುರಿಯಾದವರೂ ತಮ್ಮಲ್ಲಿ ಬಹಳ ಆಳವಾಗಿ ಬೇರು ಬಿಟ್ಟರುವ ಈ ದೌರ್ಬಲ್ಯವನ್ನು ದೂರಕ್ಕೆ ಕಿತ್ತೆಸೆಯಲು ಶ್ರದ್ಧಾ ಪೂರ್ವಕ ಪ್ರಯತ್ನ ಮಾಡಬೇಕು. ಇವರು ತಮ್ಮಲ್ಲಿ ಸುಪ್ತವಾಗಿರುವ ಅಪಾರ ಶಕ್ತಿಯಲ್ಲಿ ಅಚಲ ವಿಶ್ವಾಸವಿಡುವುದು, ತನ್ನಲ್ಲಿ ತನಗೆ ನಂಬಿಕೆ, ತನ್ನ ಆಂತರ್ಯದ ಆಳದಲ್ಲಿ ಅಪಾರ ಶಕ್ತಿ ಇದೆ ಎಂಬ ಬಗ್ಗೆ ನಂಬಿಕೆ ಇಡುವುದು ಅತಿ ಅಗತ್ಯವಾಗಿದೆ. ಇದಕ್ಕೆಲ್ಲಾ ನಮ್ಮ ಮನಸ್ಸೇ ಕಾರಣ. ಮನವೊಂದಿದ್ದರೆ ಮಾರ್ಗ ತಾನಾಗಿಯೇ ಗೋಚರಿಸುತ್ತದೆ ಎಂಬ ಸರ್ವಕಾಲಿಕ ಸತ್ಯವನ್ನು, 'ಆಗದು ಎಂದು ಕೈಕಟ್ಟ ಕುಳಿತರೆ ಸಾಗದು ಕೆಲಸವು ಮುಂದೆ, ಮನಸೊಂದಿದ್ದರೆ ಮಾರ್ಗವು ಇಹುದು' ಎಂಬ ಕನ್ನಡ ಚಲನ ಚಿತ್ರ ಗೀತೆಯನ್ನೂ ನಾವು ನೆನಪಿಡಬೇಕು. ■

ಎಂ ಆರ್ ವೆಂಕಟರಾಮಯ್ಯ ಬೆಂಗಳೂರು

## SAD DEMISE



**Mr. B.S. Hiriannaiah**

**Mr. Hiriannaiah**, was a senior member of the Association. He was an Engineer from NIE Mysore. He worked in BEST, Reserve Bank. His elder Brother Mr. B S Rama Rao was a president of the Association during early 1970s. he was an active member. He passed away on April 27 at Bangalore. He is survived by his wife Mrs. Nirmala and a son who is married to famous singer Smitha Bellur.

We all pray for your devince soul to attain Moksh.




ಲೇಖಕ ಅತ್ಯಂತ ಮಹತ್ವದ ಲೇಖಕಿ ಅಥವಾ ಲೇಖಕಿಯಾಗುತ್ತಾಳೆ ಅಂದರೆ ಲಿಂಗ ವಿವಕ್ಷೆಯನ್ನು ದಾಟಿ ಆತ ತನ್ನ ಪ್ರತಿಭೆಯನ್ನು ಸ್ಫುರಣಗೊಳಿಸುತ್ತಾನೆ. ಮಗನ ಗುರುತು ಆಕೆ ಹೆಣ್ಣು, ಅಥವಾ ಗಂಡು ಅನ್ನೋದು. ಆದರೆ ಮಹಾನ್ ಲೇಖಕ ಲಿಂಗ ವಿವಕ್ಷೆಯನ್ನು ದಾಟಿ ಮುಂದೆ ಹೋಗುತ್ತಾನೆ. ನಮ್ಮಲ್ಲಿ ಕೆಲವು ವಚನಕಾರರು ತಮ್ಮನ್ನು ಮಹಿಳೆಯೆಂದೇ ಭಾವಿಸಿ ಅದ್ಭುತವಾದ ವಚನಗಳನ್ನು ರಚನೆ ಮಾಡಿದ್ದನ್ನು ನೆನೆಯಬಹುದು. ಮಧುರ ಚೆನ್ನರಂತಹ ಕನ್ನಡದ ಅತಿ ಘನವಾದ ಕವಿ. ತಾನು ಮಲ್ಲಿಕಾರ್ಜುನ ಅಥವಾ ಶಿವ, ಆತನ ನಲ್ಲೆ ಅಂತ ಭಾವಿಸಿಯೇ ಮಹತ್ವದ ವಚನಗಳನ್ನು ರಚಿಸಿದರು. ಕೆಲವು ಕವಿಗಳಂತೂ ತಾವು ಮಕ್ಕಳು ಅಂತ ಭಾವಿಸಿ ಬರೆದುದುಂಟು. ವಯಸ್ಸಾದರೂ ತಾನು ಮಗು ಅಂತ ಕವಿತೆಗಳನ್ನು ಕಟ್ಟಿದ್ದುಂಟು. ಅಂದರೆ ಎಲ್ಲೋ ಒಂದು ಕಡೆ ಲೇಖಕ ಎಲ್ಲ ರೀತಿಯ ವರ್ಗ, ವರ್ಣ, ಲಿಂಗ ವಿವಕ್ಷೆಯಿಂದ ದಾಟಿಕೊಂಡು ಕೇವಲ ಒಂದು ಪ್ರತಿಭಾ ಸ್ವರೂಪಿಯಾಗಿ ಕಾಣಿಸಿಕೊಳ್ಳುತ್ತಾನೆ. ಇಂಗ್ಲೀಷಿನಲ್ಲೂ ಪೊಯಟೆಸ್ ಅಂತ ಬಳಸುತ್ತಿಲ್ಲ. ಪೊಯಟ್ ಅಂತಾನೇ ಕರಿತಾರೆ. ಇದಕ್ಕೆ




ಲಿಂಗವಿಲ್ಲ. ಇದು ಬಹಳ ಸಾಂಕೇತಿಕವಾದದ್ದು ಅಂತ ನನಗನಿಸುತ್ತದೆ.

ಒಂದು ಆತಂಕವೆಂದರೆ ಯಾವುದೇ ಸಾಹಿತ್ಯ ಸಭೆಗೆ ಹೋದರೂನು, ಅಲ್ಲಿ ಮಾತನಾಡುವವರೂ ವೃದ್ಧರೇ, ಅದನ್ನು ಕೇಳುವವರೇ ವೃದ್ಧರೇ, ಎಳೆಯ ಪೀಳಿಗೆಯವರನ್ನು ಕಾಣುತ್ತಾ ಇಲ್ಲ. ಇದು ಬಹಳ ಮನಸ್ಸಿಗೆ ಖೇದವನ್ನುಂಟು ಮಾಡಿದೆ. ಇವತ್ತು ಪಡೆದ ಮೂರು ಜನರೂ ಹೆಣ್ಣು ಮಕ್ಕಳೇ ಆಗಿರುವುದರಿಂದ ನನಗೆ ತುಂಬ ಸಂತಸ ಕೊಟ್ಟ ದಿನ. ಇತ್ತೀಚೆಗೆ ಯುವ ಪೀಳಿಗೆ ಸ್ವಲ್ಪ ಆಸಕ್ತಿಯನ್ನು ತೋರಿಸುವುದನ್ನು ನೋಡಿ ಮನಸ್ಸಿಗೆ ಸಂತೋಷವಾಗುತ್ತದೆ. ಅವರು ಏಕಾಗ್ರತೆಯಿಂದ, ನಿರಂತರವಾದ ಕಾವ್ಯಾಧ್ಯಯನದಿಂದ ಹುತ್ತಗಟ್ಟಿ ಕೆತ್ತಿದ್ದೇ ಆದರೆ ಕಾವ್ಯ ಪುರುಷೋತ್ತಮ ಅವರಿಗೆ ಪ್ರತ್ಯಕ್ಷನಾದಾನು.

ಅಡಿಗರೊಮ್ಮೆ ಒಂದು ಸಭೆಯಲ್ಲಿ ಅನಂತ ಮೂರ್ತಿ ಮತ್ತು ಚಿತ್ತಾಲರನ್ನು ಸನ್ಮಾನಿಸುತ್ತಾ ಒಂದು ಮಾತನ್ನು ಹೇಳಿದರು. ಅನಂತಮೂರ್ತಿ ಮಹಾ ಪ್ರತಿಭಾವಂತ ಆದರೆ ಅವರ ಪ್ರತಿಭೆ ಅನೇಕ ಕವಲುಗಳಲ್ಲಿ ಸೀಳಿಕೊಂಡು ಅದು ಪೂರ್ಣಾಭಿವ್ಯಕ್ತಿಯನ್ನು ಪಡೆಯುತ್ತಿಲ್ಲ ಚಿತ್ತಾಲರ ಹಾಗೆ. ಚಿತ್ತಾಲರು ಬಹಳ ಗಟ್ಟಿ ಲೇಖಕ ಅಂದಿರೋದು ನನಗೆ ಇವತ್ತಿಗೂ ನೆನಪಿದೆ. ನಮ್ಮ ಲೇಖಕರು ಮೊದಲು ಆಮಿಷಗಳನ್ನು ಗೆಲ್ಲಬೇಕಾಗಿದೆ. ತಕ್ಷಣದ ಪ್ರಸಿದ್ಧಿ, ಖ್ಯಾತಿಗಳನ್ನು ಗೆಲ್ಲಬೇಕಾಗಿದೆ. ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಳ್ಳಬೇಕು. ದೇವರು ಕೊಟ್ಟ ಶಕ್ತಿಯನ್ನು ಪ್ರತಿಭೆಯನ್ನು ಅತ್ಯಂತ ಜತನವಾಗಿ, ಜಿಪುಣವಾಗಿ ಬಳಸಬೇಕು. ಅದನ್ನು ಮಾಡುತ್ತೇನೆ, ಇದನ್ನೂ ಮಾಡುತ್ತೇನೆ ಅಂದರೆ ಕೊನೆಗೆ ಯಾವುದನ್ನೂ ಮಾಡದೇ ಹೋಗಬಹುದು. ಯಾವುದನ್ನೇ ಬರೆಯುವುದಿದ್ದರೂ ಹಠತೊಟ್ಟು ಬರೆಯಬೇಕು. ನನಗೆ ಇದೇ ಅಭಿವ್ಯಕ್ತಿ ಮಾಧ್ಯಮ. ಎಲ್ಲ ದೇವರುಗಳಿದ್ದರೂ, ನಿಮ್ಮದೇ ಆದ ಮನೆದೇವರು ಅಂತ ಇರುತ್ತದೋ ಹಾಗೆ ನೀವು ಬೇರೆ ಮಾಧ್ಯಮಗಳನ್ನು ಬರೆಯಿರಿ, ಆದರೆ ಮನೆದೇವರಂತ ನಿಮ್ಮ ಕಾವ್ಯ ಇರಲಿ. ಮಾಸ್ತಿಯವರು ಸಣ್ಣಕತೆಯಲ್ಲೇ ಎಂತಹ ಮಹತ್ವವಾದ ಸಾಧನೆಯನ್ನು ಮಾಡಿದರು. ಅಂತಹ ಮಹಾನುಭಾವ ಸಣ್ಣಕತೆಗಳನ್ನು ಬರೆದಾಗ ಕೆಲವು ವಿಮರ್ಶಕರು ಸಣ್ಣ ಕತ್ತೆಗಳು ಅಂತ ಕರೆದರು. ಅವರಿಗೆ ಅದರ ಮಹತ್ವನೇ ಗೊತ್ತಾಗಲಿಲ್ಲ. ಸಣ್ಣಕತೆಯ ಮೂಲಕ ಮಾಸ್ತಿಯವರು ದೊಡ್ಡ ಲೇಖಕನಾದುದನ್ನು ಗಮನಿಸಬಹುದು. ಅದಕ್ಕೆ ಎಂತಹ ಹಠ ಮತ್ತು ಛಲ ಬೇಕು. ಮಾಸ್ತಿಯವರಲ್ಲಿತ್ತು ಅದೆರಡೂ. ಕೆ.ಎಸ್.ನ ಅವರು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಕವಿತೆ ಬರೆಯೋದನ್ನು ನಿಲ್ಲಿಸಲಿಲ್ಲ. ಎಂಬತ್ತರ ಇಳಿ ವಯಸ್ಸಿನಲ್ಲಿ ಕಣ್ಣು ಕಾಣದಿದ್ದರೂ, ಇನ್ನೊಬ್ಬರ ಹತ್ತಿರ ಹೇಳಿ ಬರೆಯಿಸುತ್ತಿದ್ದರು. ಕವಿತೆಯಿಂದ ಸಿಗುವ ತೃಪ್ತಿ ಬೇರೆ ಯಾವುದರಲ್ಲೂ ಸಿಗುವುದಿಲ್ಲ. ಅದೇ ಪರಮಗ್ರಂಥವ್ಯ. ಬರೆಯುವಾಗ ಸಿಗುವ ಆನಂದವೇ ನಿಜವಾದ ಆನಂದ. ಏಕಾಗ್ರತೆಯಿಂದ ಕಟ್ಟಿದ ಕವಿತೆ ಒಂದು ತಪಸ್ಸು. ವಲ್ಮೀಕವನ್ನು ಸೇರದೆ ವಾಲ್ಮೀಕಿ ಆಗಲಾರರು. ವಲ್ಮೀಕದ ಬಗ್ಗೆ ಬಹಳ ದೊಡ್ಡ ಕಲ್ಪನೆ ಏನೆಂದರೆ, ಹುತ್ತ ಅನ್ನೋದನ್ನು ಭೂಮಿ ತಾಯಿಯ ಕಿವಿ ಅಂತ ಕರೆಯುತ್ತಾರೆ. ಎಲ್ಲರ ದುಃಖಗಳನ್ನು ಕೇಳಿಸುವಂತಹ ಕಿವಿ. ನಿಮ್ಮ ಮನಸ್ಸು ಕೂಡ ಸ್ವಲ್ಪ ಹೊರಗೆ ಹೋಗಿ ಸುತ್ತಾಡಿಕೊಂಡು ಬರಲಿ. ಆಗ ಹೊಸ ಸಾಧ್ಯತೆಗಳು ನಿಮ್ಮಿಂದ ರಚಿತವಾಗುತ್ತದೆ. ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಬೇಕಾದಎಂದರೆ, ನೀವು ಕನ್ನಡದ ಮುಖ್ಯ ಕವಿಗಳನ್ನು ಓದಿಕೊಂಡಿದ್ದೀರಾ? ಅನ್ನೋದು. ಪಂಪ, ರನ್ನ, ಬಸವಣ್ಣ, ಕುಮಾರವ್ಯಾಸ ಕುವೆಂಪು, ಬೇಂದ್ರೆಯನ್ನು ಓದಿದ್ದೀರಾ? ಹೊಸ ಕವಿಗಳು ನಮ್ಮ ದೊಡ್ಡ ಕಾವ್ಯ ಪರಂಪರೆಯನ್ನು ತಕ್ಕಮಟ್ಟಿಗಾದರೂ ಓದಿಕೊಂಡಿರಬೇಕು ಎಂಬ ಕಿವಿ ಮಾತನ್ನು ಹೇಳಿದರು. ಯಾಕೆ ಓದಬೇಕು ಅಂದರೆ ಇವರ ಹಾಗೆ ನಾನು ಬರೆಯಬಾರದು. ಓದುವುದು ಅವರಿಗಿಂತ ಭಿನ್ನವಾಗಬೇಕು ಹೊರತು ಅವರಂತೆ ಆಗಲಿಕ್ಕಲ್ಲ. ನೀವು ನೀವೇ ಆಗಿ. ಅನೇಕ ಕವಿಗಳಲ್ಲಿ ನಿನಗೆ ಆಪ್ತರೆನಿಸಿದ ಕವಿಯನ್ನು ಗುರುತಿಸಿಕೊಳ್ಳಿ. ಬೇಂದ್ರೆಗೆ ಲಕ್ಷ್ಮೀಶನಿದ್ದಂತೆ, ಕುವೆಂಪು ಅವರಿಗೆ ಪಂಪ, ಮಿಲ್ಟನ್ ಆಪ್ತನಾದಂತೆ, ನೀವೂ ಕುವೆಂಪು, ಬೇಂದ್ರೆ, ಪುತಿನ, ಕುಮಾರವ್ಯಾಸನನ್ನು ಮನೆದೇವರನ್ನಾಗಿ ಮಾಡಿಕೊಳ್ಳಿ. ಅದು ನಿಮಗೆ ಹೊಸ ಸವಾಲುಗಳನ್ನು, ಹೊಸ ಸಾಧ್ಯತೆಗಳನ್ನು ಕೊಡುತ್ತದೆ. ಅದ್ಭುತವಾದ ಕವಿತೆಗಳನ್ನು ಸೃಷ್ಟಿಸಿದ ಕುವೆಂಪು,




ಗಾರುಡಿಗ, ತನ್ನ ಬಾಳೇ ತನ್ನ ಮಹಾಕಾವ್ಯಕ್ಕೆ ಸಾಕು, ರಾಮನೂ ಬೇಡ, ಕೃಷ್ಣನೂ ಬೇಡ, ತನ್ನ ಬದುಕೇ ಮಹಾಕಾವ್ಯ. ಮಹಾಕಾವ್ಯ ಬರೆಯದೇನೇ ಮಹಾಕವಿಯಾದ ಬೇಂದ್ರೆಯ ಬಗ್ಗೆ, ರಸಋಷಿಯಾದ ಕುವೆಂಪು, ಅವದೂತರಾದ ಬೇಂದ್ರೆ, ಮತ್ತು ಭಕ್ತ ಪುತಿನ, ಹಾಗೆ ತನ್ನ ಕುಟುಂಬವನ್ನೇ ಇಟ್ಟುಕೊಂಡು ಕಾವ್ಯವನ್ನು ಬರೆದಂತಹ ಕೆ.ಎಸ್.ನ ಅವರಂತಹ ಮಹತ್ವದ ಕವಿಗಳ ಕಾವ್ಯ ವೈಶಿಷ್ಟ್ಯವನ್ನು ವಿಶ್ಲೇಷಿತ್ತಾ, ಇಡೀ ಆಧುನಿಕ ಕನ್ನಡ ಸಾಹಿತ್ಯವನ್ನು ನಮ್ಮ ಮುಂದೆ ತೆರೆದಿಟ್ಟರು.

ಮುಖ್ಯ ಅತಿಥಿಯಾಗಿ ಬಹುದೂರದ ಬೆಂಗಳೂರಿನಿಂದ ಆಗಮಿಸಿದ್ದ ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರಿಗೆ ಮಂಜುನಾಥಯ್ಯನವರು ಶಾಲು ಹೊದಿಸಿ, ಫಲ, ಪುಷ್ಪ ಗೌರವ ನೀಡಿ ಸನ್ಮಾನಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀಮತಿ ಕೆ. ಕಮಲಾ ಅವರು ಕವನ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಅಭಿನಂದಿಸುತ್ತಾ, ಕವಿತೆ ಮಾತ್ರವಲ್ಲ ಯಾವುದೇ ಕಾರ್ಯಕ್ಷೇತ್ರದಲ್ಲೂ ಕೆಲಸ ಮಾಡಬೇಕಾದರೂ ಹಠ ಬಹಳ ಮುಖ್ಯ ಅಂತ ಹೇಳಿದರು. ಮೈಸೂರು ಅಸೋಸಿಯೇಷನ್ ಶತಮಾನೋತ್ಸವವನ್ನು ಬಹಳ ವಿಜೃಂಬಣೆಯಿಂದ ಆಚರಿಸುವಂತಾಗಲಿ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಪ್ರಮೋದಿನಿ ರಾವ್ ಅವರು ಪ್ರಶಸ್ತಿ ವಿಜೇತ ಕವನಗಳನ್ನು ರಾಗ ಹೊಂದಿಸಿ ಹಾಡುವುದರ ಜೊತೆಗೆ ಕನ್ನಡದ ಖ್ಯಾತ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿ ರಸಮಂಜರಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರಮೋದಿನಿರಾವ್ ಅವರಿಗೆ ಅಧ್ಯಕ್ಷರಾದ ಕೆ. ಕಮಲಾ ಅವರು ಶಾಲು ಹೊದಿಸಿ, ಫಲ, ಪುಷ್ಪ ಗೌರವ ನೀಡಿ ಸನ್ಮಾನಿಸಿದರು. ಇವರೊಂದಿಗೆ ಹಾರ್ಮೋನಿಯಂನಲ್ಲಿ ಸಹಕರಿಸಿದ ಪ್ರಮೋದಿನಿರಾವ್ ಅವರ ಅಕ್ಕ ಪ್ರತಿಮ ರಾವ್ ಅವರಿಗೆ ಹಾಗೂ ತಬಲದಲ್ಲಿ ಸಹಕರಿಸಿದ ಅನುಪಮ್ ಮಿಶ್ರಯವರಿಗೆ ಪುಷ್ಪ ಗೌರವ ನೀಡಿ ಸನ್ಮಾನಿಸಲಾಯಿತು.

ಜಾಗತಿಕ ಕವನ ಸ್ಪರ್ಧೆಗೆ ಅವಿರತವಾಗಿ ಶ್ರಮಿಸಿದ ನಾರಾಯಣ ನವಿಲೇಕರ್ ಅವರಿಗೂ ನೇಸರುವಿನ ಸಂಪಾದಕಿಯಾದ ಡಾ. ಜ್ಯೋತಿ ಸತೀಶ್ ಅವರಿಗೆ ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರು ಪುಷ್ಪ ಗೌರವ ನೀಡಿ ಸನ್ಮಾನಿಸಿದರು. ಕೊನೆಯಲ್ಲಿ ಡಾ. ಮಂಜುನಾಥ್ ಅವರು ಕವನ ಸ್ಪರ್ಧೆಗೆ ತಮ್ಮ ಸಂಪೂರ್ಣ ಸಲಹೆ, ಸಹಕಾರ ನೀಡಿ ಸಹಕರಿಸಿದ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರಿಗೆ ವಿಶೇಷವಾದ ಅಭಿನಂದನೆಯನ್ನು ಸಲ್ಲಿಸಿದರು. ತೀರ್ಪುಗಾರರಾಗಿ ಸಹಕರಿಸಿದ ಹಿರಿಯ ಕವಿ ಬಿ.ಎಸ್. ಕುರ್ಕಾಲ್ ಹಾಗೂ ಡಾ. ಎಚ್. ಎಸ್. ವೆಂಕಟೇಶ್ ಮೂರ್ತಿಯವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಿದರು. ಎಲ್ಲರಿಗೂ ಸವಿ ನೆನೆಕೆಗಳನ್ನು ಸಲ್ಲಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ರಮಾ ವಸಂತ ಅವರು ಸೊಗಸಾಗಿ ನಿರ್ವಹಿಸಿದರು. ■

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

For the first time

# UNIVERSITY OF MUMBAI OFFERS NEW HIGH JOB POTENTIAL COURSES

@

# SVIMS INSTITUTE OF COMMERCE

## WITH CONTINUOUS INDUSTRY INTERACTION

*Self Financing*

- **B.Com** - Financial Manangement
- **B.Com** - Transport Management
- **B.Com** - Investment Management
- **B.M.S.** - Environment Management & Economics

**Eligibility :**
XII Qualified candidates from State Board / CBSC / ICSC / IGCSE with good academic record

Address
SVIMS CAMPUS,
Road 7 A, Near VJTI & ICT,
Beside Indulal Bhuva Park,
Wadala (W), Mumbai - 31

Contact us
022 - 24180560 / 61
022 - 24180563 / 90
Website :
www.svims.net
email :
admissions@svims.net



## SVIMS ADVANTAGE

- SVIMS Gauranteed Placement & Earn While You Learn Programs in collaboration with partner CALIBEHR
- Industrial immersion programs to provide experiential learning
- Domestic and International Industrial Visits for Global Exposure
- Entrepreneurship Development Cell to promote entrepreneurial spirit.
- Chrome Book provided to students to enable them to train on Google Learning Management System
- Optional CA / CS training intertwined with the curriculum
- Centrally Located in Mumbai with easy Rail, Monorail and Road connectivity
- State of the Art most Modern Infrastructure facilities to provide great ambience and comfort










Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938